## ಅನುಸೂಚಿ-II

### ಭಾಗ-I

### ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ನೇರನೇಮಕಾತಿಗೆ ಪರೀಕ್ಷೆ ಮತ್ತು ಪಠ್ಯಕ್ರಮಗಳ ವ್ಯವಸ್ಥೆ

ಪರೀಕ್ಷೆ ವ್ಯವಸ್ಥೆಯು ಎರಡು ಹಂತಗಳನ್ನು ಒಳಗೊಂಡಿರತಕ್ಕದ್ದು

1. ಮುಖ್ಯ ಪರೀಕ್ಷೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಪೂರ್ವಭಾವಿ ಪರೀಕ್ಷೆ (ವಸ್ತುನಿಷ್ಠ ಮಾದರಿ) ಮತ್ತು
2. ರಾಜ್ಯ ಲೆಕ್ಕಪತ್ರ ಇಲಾಖೆಯ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಮುಖ್ಯ ಪರೀಕ್ಷೆ (ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆ)

ವಿಭಾಗ-ಎ – **ಪೂರ್ವಭಾವಿ ಪರೀಕ್ಷೆ:-** ಪೂರ್ವಭಾವಿ ಪರೀಕ್ಷೆಯು ವಸ್ತುನಿಷ್ಠ (ಬಹುಆಯ್ಕೆ) ಮಾದರಿಯ ಎರಡು ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿರತಕ್ಕದ್ದು.

| ಪತ್ರಿಕೆ | ವಿಷಯ | ಗರಿಷ್ಠ ಅಂಕಗಳು | ಅವಧಿ | ಕಡ್ಡಾಯ/ ಐಚ್ಛಿಕ |
|---|---|---|---|---|
| ಪತ್ರಿಕೆ-I | ಸಾಮಾನ್ಯ ಅಧ್ಯಯನಗಳು | 150 | 2 ಗಂಟೆಗಳು | ಕಡ್ಡಾಯ |
| ಪತ್ರಿಕೆ-II | ವಾಣಿಜ್ಯ ನಿರ್ವಹಣೆ | 300 | 2 ಗಂಟೆಗಳು | ಕಡ್ಡಾಯ |
| | ಒಟ್ಟು | 450 | | |

ಟಿಪ್ಪಣಿ:1 ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಇರತಕ್ಕದ್ದು. ಅಭ್ಯರ್ಥಿಯು ಪತ್ರಿಕೆಯನ್ನು ಸಂಪೂರ್ಣವಾಗಿ ಕನ್ನಡ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಉತ್ತರಿಸಬಹುದು.

ಟಿಪ್ಪಣಿ:2 ಪೂರ್ವಭಾವಿ ಪರೀಕ್ಷೆಯು ಪದವಿ ಹಂತದ ಮಟ್ಟದ್ದಾಗಿರತಕ್ಕದ್ದು.

ಟಿಪ್ಪಣಿ:3 ಪ್ರತಿಯೊಂದು ಪತ್ರಿಕೆಯು ಎರಡು ಗಂಟೆಗಳ ಕಾಲಾವಧಿಯದಾಗಿರತಕ್ಕದ್ದು.

ಟಿಪ್ಪಣಿ:4 ಮುಖ್ಯಪರೀಕ್ಷೆಗೆ ಅನುಮತಿಸಲಾಗುವ ಅಭ್ಯರ್ಥಿಗಳ ಸಂಖ್ಯೆಯು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ಪ್ರತಿಯೊಂದು ಪ್ರವರ್ಗಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಸಾಕಷ್ಟು ಸಂಖ್ಯೆಯು ಅದೇ ಅನುಪಾತದಲ್ಲಿ ಅನುಕೂಲ ಕಲ್ಪಿಸಲು ಪೂರ್ವಭಾವಿ ಪರೀಕ್ಷೆಯಲ್ಲಿ ನಿರ್ವಹಿಸಿದ ಆಧಾರದ ಮೇಲೆ ಮೆರಿಟ್ ಕ್ರಮದಲ್ಲಿ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಲಾದ ಖಾಲಿಸ್ಥಾನಗಳ 20ರಷ್ಟು ಆಗಿರತಕ್ಕದ್ದು.

ವಿಭಾಗ-ಬಿ **ಮುಖ್ಯಪರೀಕ್ಷೆ:** ಮುಖ್ಯ ಪರೀಕ್ಷೆಯು ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯನ್ನು ಒಳಗೊಂಡಿರತಕ್ಕದ್ದು.

ಲಿಖಿತ ಪರೀಕ್ಷೆ

| ಪತ್ರಿಕೆ | ವಿಷಯ | ಗರಿಷ್ಠ ಅಂಕಗಳು | ಅವಧಿ | ಕಡ್ಡಾಯ/ ಐಚ್ಛಿಕ |
|---|---|---|---|---|
| ಪತ್ರಿಕೆ-I | ಕನ್ನಡ | 150 | 3 ಗಂಟೆಗಳು | ಕಡ್ಡಾಯ |
| ಪತ್ರಿಕೆ-II | ಇಂಗ್ಲಿಷ್ | 150 | 3 ಗಂಟೆಗಳು | ಕಡ್ಡಾಯ |
| ಪತ್ರಿಕೆ-III | ಸಾಮಾನ್ಯ ಅಧ್ಯಯನ | 300 | 3 ಗಂಟೆಗಳು | ಕಡ್ಡಾಯ |
| ಪತ್ರಿಕೆ-IV | ಸಾಮಾನ್ಯ ಅಧ್ಯಯನ | 300 | 3 ಗಂಟೆಗಳು | ಕಡ್ಡಾಯ |
| ಪತ್ರಿಕೆ-V | ಫೈನಾನ್ಶಿಯಲ್ ಅಕೌಂಟಿಂಗ್, ಮ್ಯಾನೇಜ್‌ಮೆಂಟ್ ಅಂಡ್ ಅನಾಲಿಸಿಸ್ (ಹಣಕಾಸು ಲೆಕ್ಕಶಾಸ್ತ್ರ, ನಿರ್ವಹಣೆ ಮತ್ತು ವಿಶ್ಲೇಷಣೆ) | 300 | 3 ಗಂಟೆಗಳು | ಕಡ್ಡಾಯ |
| ಪತ್ರಿಕೆ-VI | ಪ್ರಿನ್ಸಿಪಲ್ಸ್ ಆಫ್ ಮ್ಯಾನೇಜ್‌ಮೆಂಟ್ ಆರ್ಗನೈಸೇಷನ್ ಬಿಹೇವಿಯರ್ ಟ್ರೈನಿಂಗ್ ಅಂಡ್ ಡೆವಲಪ್‌ಮೆಂಟ್ (ನಿರ್ವಹಣಾ ತತ್ವಗಳು, ಸಂಘಟನಾ ನಡಾವಳಿ, ತರಬೇತಿ ಮತ್ತು ಅಭಿವೃದ್ಧಿ) | 300 | 3 ಗಂಟೆಗಳು | ಕಡ್ಡಾಯ |

| | | | | |
|---|---|---|---|---|
| ಪತ್ರಿಕೆ–VII | ಕಾರ್ಪೋರೇಟ್ ಫೈನಾನ್ಸ್, ಬಿಜಿನೆಸ್ ಎಕನಾಮಿಕ್ಸ್ ಅಂಡ್ ಟ್ಯಾಕ್ಸೇಷನ್ (ಕಾರ್ಪೋರೇಟ್ ಹಣಕಾಸು, ವಾಣಿಜ್ಯ ಅರ್ಥಶಾಸ್ತ್ರ ಮತ್ತು ತೆರಿಗೆ ವಿಧಿಸುವುದು) | 300 | 3 ಗಂಟೆಗಳು | ಕಡ್ಡಾಯ |
| ಪತ್ರಿಕೆ–VIII | ಪ್ರಿನ್ಸಿಪಲ್ ಅಂಡ್ ಪ್ರಾಕ್ಟೀಸ್ ಆಫ್ ಆಡಿಟಿಂಗ್, ಕಂಪ್ಯೂಟರ್ ಕಾನ್ಸೆಪ್ಟ್ಸ್ ಅಂಡ್ ಇ-ಕಾಮರ್ಸ್ (ಲೆಕ್ಕಪರಿಶೋಧನ ತತ್ವಗಳು ಮತ್ತು ಪದ್ಧತಿ, ಗಣಕಯಂತ್ರದ ಪರಿಕಲ್ಪನೆಗಳು ಮತ್ತು ಇ-ವಾಣಿಜ್ಯ) | 300 | 3 ಗಂಟೆಗಳು | ಕಡ್ಡಾಯ |
| | ಒಟ್ಟು | 2100 | | |

ಟಿಪ್ಪಣಿ:1 ಕಡ್ಡಾಯ ಪತ್ರಿಕೆಗಳ ಅಂಕಗಳು ಎಂದರೆ, ಕಡ್ಡಾಯ ಕನ್ನಡ ಮತ್ತು ಕಡ್ಡಾಯ ಇಂಗ್ಲೀಷನಲ್ಲಿನ ಪತ್ರಿಕೆಗಳು ಅರ್ಹತಾ ಸ್ವರೂಪದ್ದಾಗಿರತಕ್ಕದ್ದು. ಈ ಪತ್ರಿಕೆಗಳ ಪ್ರತಿಯೊಂದು ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 30ರಷ್ಟು ಮತ್ತು ಸರಾಸರಿ ಶೇಕಡಾ 35ರಷ್ಟು ನಿಗದಿಪಡಿಸಿದೆ. ಅಭ್ಯರ್ಥಿಗಳ ಅಂತಿಮ ಅರ್ಹತೆಯನ್ನು ಈ ಎರಡೂ ಪತ್ರಿಕೆಗಳಲ್ಲಿ ಪಡೆದ ಅಂಕಗಳನ್ನು ಅಂತಿಮ ಮಾಡಲು ಮೆರಿಟ್ ನಿರ್ಧರಿಸುವುದಕ್ಕಾಗಿ ಪರಿಗಣಿಸತಕ್ಕದ್ದಲ್ಲ. ಅಭ್ಯರ್ಥಿಗಳ ಅರ್ಹತಾ ಪತ್ರಿಕೆಗಳೆಂದರೆ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ನಿಗದಿಪಡಿಸಲಾದ ಅಂಕಗಳನ್ನು ಪಡೆಯದಿದ್ದರೆ, ವ್ಯಕ್ತಿತ್ವ ಪರೀಕ್ಷೆ ಮತ್ತು ಆಯ್ಕೆಗೆ ಅರ್ಹರಾಗತಕ್ಕದ್ದಲ್ಲ.

ಟಿಪ್ಪಣಿ:2 ಪರೀಕ್ಷೆಯು ಸಾಂಪ್ರದಾಯಿಕ ರೀತಿಯಲ್ಲಿರತಕ್ಕದ್ದು.

ಟಿಪ್ಪಣಿ:3 ಪ್ರಶ್ನೆಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲಿಷ್‌ಗಳೆರಡರಲ್ಲೂ ಸಿದ್ಧಪಡಿಸತಕ್ಕದ್ದು. ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯನ್ನು ಸಂಪೂರ್ಣವಾಗಿ ಕನ್ನಡದಲ್ಲಾಗಲಿ ಅಥವಾ ಇಂಗ್ಲಿಷನಲ್ಲಾಗಲಿ ಉತ್ತರಿಸಬಹುದು.

ಟಿಪ್ಪಣಿ:4 ಮುಖ್ಯಪರೀಕ್ಷೆಯ ಪತ್ರಿಕೆ-I ಕನ್ನಡ ಮತ್ತು ಪತ್ರಿಕೆ-II ಇಂಗ್ಲಿಷ್ ಪತ್ರಿಕೆಗಳನ್ನು ಹೊರತುಪಡಿಸಿ ಮುಖ್ಯಪರೀಕ್ಷೆಯ ಮಾನದಂಡವು ಪದವಿ ಮಟ್ಟದ್ದಾಗಿರುತ್ತದೆ. ಪತ್ರಿಕೆ- I ಕನ್ನಡ, ಪತ್ರಿಕೆ- II, ಇಂಗ್ಲಿಷ್ ಪತ್ರಿಕೆಗಳು ಮಾನದಂಡವು ಎಸ್‌ಎಸ್‌ಎಲ್‌ಸಿ ಮಟ್ಟದ ಅನುಕ್ರಮವಾಗಿ ಪ್ರಥಮ ಭಾಷೆ ಕನ್ನಡ ಮತ್ತು ಪ್ರಥಮ ಭಾಷೆ ಇಂಗ್ಲಿಷ್ ಆಗಿರುತ್ತದೆ.

ವಿಭಾಗ-ಸಿ: **ವ್ಯಕ್ತಿತ್ವ ಪರೀಕ್ಷೆ:** ಕರ್ನಾಟಕ ಲೋಕಸೇವಾ ಆಯೋಗವು ಸಾಧ್ಯವಾಗಬಹುದಾದಷ್ಟು, ಮುಖ್ಯ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಮೆರಿಟ್‌ಗನುಸಾರ ಸೇವೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅಭ್ಯರ್ಥಿಗಳ ಸಂಖ್ಯೆಯ ಮೂರುಪಟ್ಟು ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸತಕ್ಕದ್ದು, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಅವರ ಮೀಸಲಾತಿಯನ್ವಯ ಅವರಿಗೆ ಮೀಸಲಿಟ್ಟ ಖಾಲಿ ಸ್ಥಾನಗಳನ್ನು ಹೆಚ್ಚಿಸಲು ಅದೇ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯುವುದಕ್ಕೆ ಒಳಪಟ್ಟು ವ್ಯಕ್ತಿತ್ವ ಪರೀಕ್ಷೆಯನ್ನು ಗರಿಷ್ಠ 100 ಅಂಕಗಳಿಗೆ ನಡೆಸತಕ್ಕದ್ದು. ವ್ಯಕ್ತಿತ್ವ ಪರೀಕ್ಷೆಯ ಉದ್ದೇಶವು ಆತನು ಅಭ್ಯರ್ಥಿಯಾಗಿ ಸೇವೆಗೆ ಅಥವಾ ಸೇವೆಗಳಿಗೆ ವೈಯಕ್ತಿಕ ಸೂಕ್ತತೆಯನ್ನು (ಅರ್ಹತೆಯನ್ನು) ನಿರ್ಧರಿಸುವುದಾಗಿದೆ. ವ್ಯಕ್ತಿತ್ವ ಪರೀಕ್ಷೆಯ ಸಮಯದಲ್ಲಿ ನಿರ್ಧರಿಸ ಬೇಕಾದ ಅರ್ಹತೆಗಳು, ಅಭ್ಯರ್ಥಿಯ ಮಾನಸಿಕ ಜಾಗರೂಕತೆ, ಸಂದಿಗ್ಧ ಪರಿಸ್ಥಿತಿಯಲ್ಲಿ ಹೊಂದಾಣಿಕೆ, ಸ್ಪಷ್ಟ ಮತ್ತು ತಾರ್ಕಿಕ ವಿವರಣೆ, ತೀರ್ಮಾನತೆಗೆದುಕೊಳ್ಳುವ ಸಾಮರ್ಥ್ಯ, ಆಸಕ್ತಿಯ ವಿಭಿನ್ನತೆ ಮತ್ತು ವಿಶಾಲತೆ, ಸಾಮಾಜಿಕ ಒಗ್ಗಟ್ಟಿನ ಸಾಮರ್ಥ್ಯ, ನಾಯಕತ್ವ ಮತ್ತು ಬುದ್ಧಿಶಕ್ತಿಯ ಗಾಢತೆಯನ್ನು ತಿಳಿಯುವುದಾಗಿದೆ.

## ವಿಭಾಗ - II
## ಪರೀಕ್ಷೆಯ ಪಠ್ಯಕ್ರಮ

### ಭಾಗ-ಎ
### ಪೂರ್ವಭಾವಿ ಪರೀಕ್ಷೆ

(I) ಪತ್ರಿಕೆ- I ಸಾಮಾನ್ಯ ಅಧ್ಯಯನಗಳು

ಎ) ಸಾಮಾನ್ಯ ವಿಜ್ಞಾನ

ಬಿ) ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಹತ್ವದ ಪ್ರಚಲಿತ ವಿದ್ಯಮಾನಗಳು

ಸಿ) ಭಾರತದ ಇತಿಹಾಸ

ಡಿ) ವಿಶ್ವ ಭೌಗೋಳಿಕ ಶಾಸ್ತ್ರ

ಇ) ಭಾರತೀಯ ರಾಜನೀತಿ ಮತ್ತು ಅರ್ಥಶಾಸ್ತ್ರ

ಎಫ್) ಭಾರತದ ರಾಷ್ಟ್ರೀಯ ಚಳುವಳಿ ಮತ್ತು ಸಾಮಾನ್ಯ ಮಾನಸಿಕ ಸಾಮರ್ಥ್ಯ.

(II) ಪತ್ರಿಕೆ-II,- ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾ ಶಾಸ್ತ್ರ (ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್) ಮುಖ್ಯ ಪರೀಕ್ಷೆಗೆ ನಿಗದಿಪಡಿಸಲಾದಂತೆ.

## ಭಾಗ-ಬಿ
## ಮುಖ್ಯ ಪರೀಕ್ಷೆ

| (I) ಪತ್ರಿಕೆ- I | | ಕನ್ನಡ |
|---|---|---|
| (ಎ) | ನೀಡಲಾದ ಉದ್ಧೃತ ಭಾಗದ ವ್ಯಾಪಕತೆ | 25 ಅಂಕಗಳು |
| (ಬಿ) | ಪದಪ್ರಯೋಗ | 25 ಅಂಕಗಳು |
| (ಸಿ) | ವಿಷಯ ಸಂಕ್ಷೇಪಣೆ | 25 ಅಂಕಗಳು |
| (ಡಿ) | ಶಬ್ದ ಸಂಗ್ರಹ | 25 ಅಂಕಗಳು |
| (ಇ) | ಲಘು ಪ್ರಬಂಧ | 25 ಅಂಕಗಳು |
| (ಎಫ್) | ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ | 25 ಅಂಕಗಳು |

| (II) ಪತ್ರಿಕೆ- II | | ಇಂಗ್ಲೀಷ್ |
|---|---|---|
| (ಎ) | ನೀಡಲಾದ ಉದ್ಧೃತ ಭಾಗದ ವ್ಯಾಪಕತೆ | 25 ಅಂಕಗಳು |
| (ಬಿ) | ಲಿಖಿತ ಸಾರಾಂಶ | 25 ಅಂಕಗಳು |
| (ಸಿ) | ಪದಪ್ರಯೋಗ | 25 ಅಂಕಗಳು |
| (ಡಿ) | ಶಬ್ದ ಸಂಗ್ರಹ | 25 ಅಂಕಗಳು |
| (ಇ) | ಲಘು ಪ್ರಬಂಧ | 25 ಅಂಕಗಳು |
| (ಎಫ್) | ಪತ್ರವ್ಯವಹಾರ ಕೌಶಲ್ಯ | 25 ಅಂಕಗಳು |

(III) ಪತ್ರಿಕೆ– III ಸಾಮಾನ್ಯ ಅಧ್ಯಯನಗಳು

ಎ. ಆಧುನಿಕ ಭಾರತದ ಇತಿಹಾಸ ಮತ್ತು ಇತಿಹಾಸದ ವಿಶೇಷ ಉಲ್ಲೇಖದೊಂದಿಗೆ ಭಾರತದ ಸಂಸ್ಕೃತಿ ಮತ್ತು ಕರ್ನಾಟಕದ ಸಂಸ್ಕೃತಿ

ಬಿ. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ಘಟನೆಗಳು

ಸಿ. ಅಂಕಿಅಂಶಗಳ ವಿಶ್ಲೇಷಣೆ, ನಕ್ಷೆ ಮತ್ತು ರೇಖಾಕೃತಿಗಳು

(IV) ಪತ್ರಿಕೆ– IV ಸಾಮಾನ್ಯ ಅಧ್ಯಯನಗಳು

ಎ. ಕರ್ನಾಟಕ ರಾಜ್ಯದ ಉಲ್ಲೇಖಗಳೊಂದಿಗೆ ಭಾರತೀಯ ರಾಜನೀತಿ

ಬಿ. ಭಾರತದ ಅರ್ಥವ್ಯವಸ್ಥೆ ಮತ್ತು ಭಾರತದ ಭೌಗೋಳಶಾಸ್ತ್ರ, ಕರ್ನಾಟಕ ಅರ್ಥವ್ಯವಸ್ಥೆ ಮತ್ತು ಭಾರತಕ್ಕೆ ವಿಶೇಷವಾಗಿ ಉಲ್ಲೇಖಗಳನ್ನೊಳಗೊಂಡು

ಸಿ. ಕರ್ನಾಟಕ ಮತ್ತು ಭಾರತದ ಅಭಿವೃದ್ಧಿಯಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಮತ್ತು ಮಹತ್ವ.

(V) ಪತ್ರಿಕೆ– V ಹಣಕಾಸಿನ ಲೆಕ್ಕ ಶಾಸ್ತ್ರದ ನಿರ್ವಹಣೆ ಮತ್ತು ವಿಶ್ಲೇಷಣೆಗಳು

ಎ. **ಲೆಕ್ಕಶಾಸ್ತ್ರದ ಸಿದ್ಧಾಂತ ಮತ್ತು ಪದ್ಧತಿ**

ಎ. **ಲೆಕ್ಕಶಾಸ್ತ್ರದ ವ್ಯಾಖ್ಯಾನಗಳು** – ಅವಶ್ಯಕತೆ, ಲೆಕ್ಕಶಾಸ್ತ್ರವು ಕಲೆಯೋ ಮತ್ತು ವಿಜ್ಞಾನವೋ ಲೆಕ್ಕಶಾಸ್ತ್ರದ ,ಅಗತ್ಯತೆ, ಲೆಕ್ಕಶಾಸ್ತ್ರದ ವ್ಯಾಪ್ತಿ, ಶಿಸ್ತುಗಳೊಂದಿಗೆ ಲೆಕ್ಕಶಾಸ್ತ್ರದ ಸಂಬಂಧ, ಲೆಕ್ಕಶಾಸ್ತ್ರ ಪದ್ಧತಿಯ ಇತಿಹಾಸ.

ಬಿ. **ಲೆಕ್ಕಶಾಸ್ತ್ರ, ಸಿದ್ಧಾಂತದ ರಚನೆ.**– ಪರಿಕಲ್ಪನೆಯ ಚೌಕಟ್ಟು, ಉದ್ದೇಶಗಳು, ಪ್ರಸ್ತಾವಗಳು, ಭಾವನೆಗಳು, ಒಡಂಬಡಿಕೆಯ ಕಲ್ಪನೆಗಳು, ಭಾರತದ ಮಾನದಂಡ, ಸಾಮಾನ್ಯವಾಗಿ ಅಂಗೀಕರಿಸಲಾದ ಲೆಕ್ಕಶಾಸ್ತ್ರದ ತತ್ವಗಳು.

ಸಿ. **ಮಾನವ ಸಂಪನ್ಮೂಲ ಲೆಕ್ಕಶಾಸ್ತ್ರ ಅಗತ್ಯತೆ ಮತ್ತು ಅಭಿವೃದ್ಧಿ.**– ಪರಿಕಲ್ಪನೆಗಳು ಮತ್ತು

ಉದ್ದೇಶಗಳು ಮಾನವ ಸಂಪನ್ಮೂಲಗಳ ಮೌಲ್ಯಮಾಪನ ಐತಿಹಾಸಿಕ ಖರ್ಚಿನ ಪ್ರಸ್ತಾಪಗಳು ಬದಲಾಗಿತದಾಣಿಕೆಯ ವೆಚ್ಚದ ಪ್ರಸ್ತಾಪಗಳು ಮತ್ತು ಅವಕಾಶ ಖರ್ಚಿನ ಪ್ರಸ್ತಾಪಿಸುವಿಕೆ ಮಾನವ ಸಂಪನ್ಮೂಲ ಲೆಕ್ಕಶಾಸ್ತ್ರದ ಸೌಲಭ್ಯಗಳು, ಮಾನವ ಸಂಪನ್ಮೂಲಗಳ ಲೆಕ್ಕದ ಸಮಸ್ಯೆಗಳು ಮತ್ತು ಪರಿಮಿತಿಗಳು ಮಾನವ ಸಂಪನ್ಮೂಲಗಳ ಲೆಕ್ಕದ ಅರ್ಹತೆಗಳು ಮತ್ತು ಪರಿಮಿತಿಗಳು ಭಾರತದ ಕಾರ್ಯಕ್ಷೇತ್ರ – ವಿಷಯಗಳ ಅಧ್ಯಯನಗಳು.

ಡಿ. **ಬೆಲೆಯ ಮಟ್ಟ ಬದಲಾವಣೆಗಳಿಗಾಗಿ ಲೆಕ್ಕಶಾಸ್ತ್ರ:** ಬೆಲೆಯ ಮಟ್ಟ, ಬದಲಾವಣೆ ಮತ್ತು ಹಣಕಾಸಿನ ವಿವರ ಪತ್ರಗಳು, ಪ್ರಚಲಿತ ಖರೀದಿ ಸಾಮರ್ಥ್ಯದ ಲೆಕ್ಕ, ಪ್ರಚಲಿತ ಖರ್ಚಿನ ಲೆಕ್ಕದ ನಿರ್ದಿಷ್ಟತೆ ಮತ್ತು ಸಾಮಾನ್ಯ ಬೆಲೆಯ ಮಟ್ಟದ ಲೆಕ್ಕ, ಬೆಲೆಯ ಮಟ್ಟದ ಬದಲಾವಣೆ. ಲೆಕ್ಕದ ಮಾನದಂಡದ ಬದಲಾವಣೆಗಳು, ಅರ್ಹತೆಗಳು ಮತ್ತು ಪರಿಮಿತಿಗಳು.

ಇ. **ಕಾಣ ಬರುವ ವರದಿ ಮಾಡುವ ಅಂಶಗಳು:** ನಿರ್ದಿಷ್ಟ ಸರಕಿನ ಲೆಕ್ಕ, ಅಗೋಚರ ಲೆಕ್ಕ ಮೌಲ್ಯವರ್ಧಿತ ಲೆಕ್ಕ, ಎಕ್ಸ್‌ಬಿಆರ್‌ಎಲ್ ಲೆಕ್ಕ ಸನ್ನಿವೇಶದ ವರದಿ.

ಬಿ. **ಹಣಕಾಸು ನಿರ್ವಹಣೆ ಮತ್ತು ವಿಶ್ಲೇಷಣೆ:**

ಎ. ಬಂಡವಾಳ ವೆಚ್ಚ, ಈಕ್ವಿಟಿ ಸ್ಟಾಕುವಿನ ವೆಚ್ಚ ಮತ್ತು ದೀರ್ಘಾವಧಿ ಸಾಲಗಳು, ಅಲ್ಪಾವಧಿ ಸಾಲಗಳ ವೆಚ್ಚ, ಬಂಡವಾಳ ಮಾರುಕಟ್ಟೆ ಕಲ್ಪನಾಧಾರಿತ, ಮಾದರಿಯ ಸ್ಪಷ್ಟವಾದ ಲಿಂಟರ್ ಮಾದರಿಯ ಪ್ರಾಯೋಗಿಕ ಮೌಲ್ಯಮಾಪನದ ವ್ಯತ್ಯಸ್ತ.

ಬಿ. ಬಂಡವಾಳ ರೂಪಿಸುವ ಕಲ್ಪನೆ: ಸಾಂಪ್ರದಾಯಿಕ ಮತ್ತು ಮೊಡಿಗ್ಲಾನಿ ಪ್ರಸ್ತಾವನೆ, ಪ್ರಸ್ತಾವನೆಯ ಪ್ರಾಯೋಗಿಕ ಮೌಲ್ಯಮಾಪನ – ಲಾಭಾಂಶ ಕಾರ್ಯನೀತಿಯ ತೀರ್ಮಾನಗಳು, ಪ್ರಭಾವ ಬೀರುವ ಅಂಶಗಳ ಲಾಭಾಂಶ ಕಾರ್ಯನೀತಿ ಸಾಂಪ್ರದಾಯಿಕ ಪ್ರಸ್ತಾವನೆ ಮತ್ತು ಲಾಭಾಂಶ ಕಾರ್ಯನೀತಿಗಳ ವಿವಿಧ ಕಲ್ಪನಾಧಾರಿತ ವಿಧಗಳು

ಸಿ. ನಿರ್ವಹಣಾ ಬಂಡವಾಳ ವ್ಯವಸ್ಥಾಪನೆ: ಹೂಡಿಕೆ ಸಾಲಗಾರರ ಅಲ್ಪಾವಧಿ ಆಸ್ತಿಗಳಲ್ಲಿ ಹೂಡಿಕೆಯ ಆಶಾವಾದಿತನ ಭದ್ರತೆಗಳು ಮತ್ತು ನಿಧಿಗಳ ಆಶಾವಾದಿತನ

ಮೂಲಗಳನ್ನು ನಿರ್ಧರಿಸುವುದು

ಡಿ. ಬಹುರಾಷ್ಟ್ರೀಯ ನಿಗಮಗಳು ಹಣಕಾಸಿನ ನಿರ್ವಹಣೆ: ಬಹುರಾಷ್ಟ್ರೀಯ ನಿರ್ಧಾರಯಕಗಳ ವ್ಯಾಪ್ತಿಯ ನಿರ್ವಹಣೆ, ಬಂಡವಾಳ ವ್ಯವಸ್ಥೆಯ ಲೆಕ್ಕದ ಪ್ರಮುಖ ಅಂಶಗಳು, ಬಂಡವಾಳದ ಆಯವ್ಯಯ – ಬಂಡವಾಳದ ರಚನೆ ಮತ್ತು ಲಾಭಾಂಶ ಕಾರ್ಯನೀತಿಗಳು.

ಇ. ಮರ್ಜರ್‌ಗಳು ಮತ್ತು ಸ್ವಾಧೀನಪಡಿಸಿಕೊಳ್ಳುವುದು: ವೈಶಿಷ್ಟ್ಯದ ಮಾದರಿಗಳು – ಮೌಲ್ಯಮಾಪನ ವಿಲೇಖ ರಚನೆ ಮಾಡುವುದು, ವ್ಯವಸ್ಥಾಪನಾ ತಂತ್ರ ಕುಶಲತೆಗಳ ನಿಯಂತ್ರಣ ಸನ್ನಿವೇಶ.

೩. **ಸ್ವಂತ ಆರ್ಥಿಕ ಯೋಜನೆ:**

ಎ. ಆರ್ಥಿಕ ಯೋಜನೆಯ ಕಾರ್ಯವಿಧಾನ: ಗುರಿಗಳನ್ನು ರೂಪಿಸುವುದು, ಅನೌಪಚಾರಿಕ ಆಯವ್ಯಯವನ್ನು ತಯಾರಿಸುವುದು – ಹೂಡಿಕೆ ಅವಕಾಶಗಳು ಹಣಕಾಸು ಮತ್ತು ಭೌತಿಕವಾಗಿ ಹೂಡಿಕೆಗಳು – ಆರ್ಥಿಕ ಯೋಜನೆಯ ಪಾತ್ರ.

ಬಿ. ಉಳಿತಾಯ ಯೋಜನೆಗಳು: ಉಳಿತಾಯ ಪತ್ರಗಳು, ಗುರಿಗಳನ್ನು ರೂಪಿಸುವುದು, ಉಳಿತಾಯ ಯೋಜನೆಗಳನ್ನು ಸ್ಥಾಪಿಸುವುದು – ತೆರಿಗೆ ಉಳಿತಾಯ ಯೋಜನೆಗಳು.

ಸಿ. ಹೂಡಿಕೆ ಯೋಜನೆಗಳು: ಗುರಿಗಳನ್ನು ರೂಪಿಸುವುದು – ವಾಹನಗಳ ಮೇಲೆ ಹೂಡುವುದು – ಹೂಡಿಕೆಗಳ ತೊಂದರೆಗಳು, ಹೂಡಿಕೆಗಳ ಅಭಿವೃದ್ಧಿ.

ಡಿ. ಯೋಜನೆಗಳ ಮುಕ್ತಾಯ – ಯೋಜನೆಗಳನ್ನು ರೂಪಿಸುವುದು ಮತ್ತು ಹೂಡಿಕೆ ಯೋಜನೆಗಳ ಮುಕ್ತಾಯ – ಪಿಂಚಣಿ ಯೋಜನೆಗಳು – ವಾರ್ಷಿಕ ಯೋಜನೆಗಳು – ಸಾಮಾಜಿಕ ಭದ್ರತೆ ಯೋಜನೆಗಳು.

ಇ. ಜೀವ ಆರ್ಥಿಕ ತೊಂದರೆಗಳಿಗೆ ಸಂಬಂಧಿಸಿದಂತೆ ಸಂರಕ್ಷಣೆ: ಜೀವ ವಿಮೆ ಯೋಜನೆ, ತೊಂದರೆ ನಿರ್ವಹಣೆ ಮತ್ತು ವಿಮೆ ಲಕ್ಷಣಗಳು, ಜೀವ ಮತ್ತು ಅಜೀವ ಪಾಲಿಸಿಗಳ ಪ್ರಾದರ್ಶನ ವೈಶಿಷ್ಟ್ಯ, ತೆರಿಗೆ ಸೌಲಭ್ಯಗಳು.

## ಬಿ. ಮುಂಗಡ ನಿರ್ವಹಣೆಯ ಲೆಕ್ಕ:

ಎ) ನಿರ್ವಹಣೆ ಅಕೌಂಟೆಂಟ್‌ಗಳ ಕಾರ್ಯಾಚರಣೆಗಳ ಸಂಶೋಧನೆ: ಮೇಟ್ರಿಕ್ಸ್ ಬೀಜಗಣಿತ, ಸಂಕಲನ–ವ್ಯವಕಲನ–ಗುಣಕಾರ ಮತ್ತು ವಿಲೋಮ – ಮೇಟ್ರಿಕ್ಸ್‌ನ ವಿಧಗಳು. ರೇಖಾತ್ಮಕ ವಿನ್ಯಾಸವನ್ನು ಸಿದ್ಧಪಡಿಸುವುದು – ಗ್ರಾಫಿಕ್‌ನ ಪ್ರಸ್ತಾವನೆ ಮತ್ತು ಸಂಕೀರ್ಣ ವಿಧಾನ, ಎರಡು ಹಂತದ ವಿಧಾನ.

ಬಿ) ದ್ವಿತ್ವ ಮತ್ತು ಉಭಯ ಸರಳ ವಿಧಾನ:– ಹೆಚ್ಚಿನ ಅರ್ಥವಿವರಣೆ – ಹೆಚ್ಚಿನ ಸಂಖ್ಯಾ ವ್ಯತ್ಯಾಸಗಳು.

ಸಿ) ಪೂರ್ಣಾಂಕಗಳ ಕಾರ್ಯಸೂಚಿ – ವರ್ಗೀಯ ಸಮೀಕರಣಗಳ ಕಾರ್ಯಸೂಚಿ.

ಡಿ) ಅರೆ ರೇಖಾತ್ಮಕ ವಿನ್ಯಾಸದ ಕಾರ್ಯಸೂಚಿ – ವರ್ಗೀಯ ಸಮೀಕರಣಗಳ ಕಾರ್ಯಸೂಚಿ.

ಇ) ಸಾಗಿಸುವ ವ್ಯವಸ್ಥೆಯ ವಿಧಗಳು. ಅನುಕರಿಸುವುದು.

ಎಫ್) ಅಂಚಿನಲ್ಲಿನ ಮೌಲ್ಯ ನಿರ್ಧಾರಣೆ ಮತ್ತು ನಿರ್ಣಯ ಮಾಡುವುದು: ಪೀಠಿಕೆ–ಅರ್ಥ ವಿವರಣೆ – ಪರಿಭಾಷೆ – ವ್ಯಾಪ್ತಿ ಮತ್ತು ಪರಿಕಲ್ಪನೆಗಳು – ವೆಚ್ಚ ವ್ಯವಹಾರದ ವಿಶ್ಲೇಷಣೆಗಳು – ವಿಂಗಡಿಸುವ ಸಮ ಸಂಖ್ಯೆಯ ವಿಶ್ಲೇಷಣೆಗಳು – ವಿಂಗಡಿಸುವ ಸಮ ಸಂಖ್ಯೆಯ ವಿಶ್ಲೇಷಣೆಗಳ ಪ್ರಸ್ತಾವನೆಗಳು – ವೆಚ್ಚ ಮತ್ತು ಆದಾಯ ಅಂಶಗಳ ಸಂಬಂಧದಲ್ಲಿ ವಿಂಗಡಿಸುವ ವಿಶ್ಲೇಷಣೆಗಳು – ಮತ್ತು ಬಹು ಹುಟ್ಟುವಳಿ ವಿಂಗಡಣಾ ಸಮ ಸಂಖ್ಯೆಯ ವಿಶ್ಲೇಷಣೆಗಳು. ವಿಂಗಡಿಸುವ ಸಮ ಸಂಖ್ಯೆಯ ವಿಶ್ಲೇಷಣೆಗಳ ಆಧಾರಭೂತ ಎಣಿಕೆಗಳು – ವಿಂಗಡಿಸುವ ಸಮ ಸಂಖ್ಯೆಯ ವಿಶ್ಲೇಷಣೆಗಳ ಪರಿಮಿತಿಗಳು.

ಜಿ) ಪಂಕ್ತಿಗೆಯ ಪರಿಕಲ್ಪನೆಗಳು ಮತ್ತು ಅಲ್ಪಾವಧಿ ಲಾಭದಾಯಕತೆಯ ವಿಶ್ಲೇಷಣೆಗಳು: ನಿರ್ಬಂಧಕ ಷರತ್ತುಗಳ ಅಡಿಯಲ್ಲಿ ಲಾಭದಾಯಕತೆಯ ವಿಶ್ಲೇಷಣೆಗಳು – ಲಾಭ – ಪ್ರಮಾಣದ ಅನುಪಾತ ಮತ್ತು ಅವುಗಳ ಉಪಯೋಗಗಳು – ಲಾಭಗಳ ಪ್ರಮಾಣಗಳ ರೇಖಾಚಿತ್ರಗಳು.

ಹೆಚ್) ಅಂಚಿನಲ್ಲಿನ ಮೌಲ್ಯ ನಿರ್ಧಾರಣೆ ಮತ್ತು ನಿರ್ವಹಣಾ ನಿರ್ಣಯಗಳು: ಲಾಭದ ಯೋಜನೆಗಳು – ಬೆಲೆ ನಿರ್ಣಯ ಉತ್ಪಾದನೆಯ ನಿರ್ಣಯ ಮಾಡುವುದು – ತಯಾರಿಕೆ ಮತ್ತು ಖರೀದಿ ನಿರ್ಣಯದ ಸೇರಿಕೆ – ಉತ್ಪನ್ನ ನಿರ್ಣಯಗಳು – ವಿತರಣಾ ದರದ ವಿಶ್ಲೇಷಣೆಗಳು.

ಐ) ನೇರ ಮೌಲ್ಯ ನಿರ್ಧಾರಣೆ: ಅರ್ಥ ವಿವರಣೆ – ಪ್ರಾಮುಖ್ಯತೆ ಮತ್ತು ಆದಾಯ ವಿವರ ಪಟ್ಟಿಕೆಗಳ ಸಿದ್ಧತೆ – ವಿಲೀನ ದರದೊಂದಿಗೆ ಹೋಲಿಕೆ – ಮೌಲ್ಯ ನಿರ್ಧಾರಣೆಯ ಹೆಸರಿನಲ್ಲಿ ವಾದಗಳು – ನೇರ ಮೌಲ್ಯ ನಿರ್ಧಾರಣೆಯ ವಿಮರ್ಶೆ.

ಜೆ) ಮೌಲ್ಯ ವಿಶ್ಲೇಷಣೆಗಳು ಮತ್ತು ಮೌಲ್ಯ ನಿರ್ವಹಣೆ: – ಮೌಲ್ಯ ವಿಶ್ಲೇಷಣೆಗಳ ತಂಡದ ಮೌಲ್ಯದ ಮೂಲ ಪರಿಕಲ್ಪನೆಗಳು – ಮೌಲ್ಯ ವಿಶ್ಲೇಷಣೆಗಳ ಅಧ್ಯಯನಕ್ಕೆ ಆಧಾರಭೂತ ಕಾರ್ಯವಿಧಾನಗಳು – ಮೌಲ್ಯ ವಿಶ್ಲೇಷಣೆಗಳ ಅಧ್ಯಯನದಿಂದ ಪ್ರಯೋಜನಗಳು ಮತ್ತು ಪ್ರತಿರೋಧ – ನಿರ್ವಹಣೆಯನ್ನು ವರದಿ ಮಾಡುವುದು – ವರದಿ ಮಾಡುವ ಉದ್ದೇಶಗಳು – ವಿವಿಧ ನಿರ್ವಹಣಾಮಟ್ಟಗಳನ್ನು ವರದಿ ಮಾಡುವ ಅಗತ್ಯತೆಗಳು – ವರದಿಗಳ ವಿಧಗಳು – ವರದಿ ಮಾಡುವ ಸಾಮಾನ್ಯ ತತ್ವಗಳು – ವರದಿ ಮಾಡುವ ವಿಧಾನಗಳು – ನಿರ್ದೇಶಕರ ಮಂಡಳಿಗೆ ವರದಿಗಳು – ಉನ್ನತ ನಿರ್ವಹಣೆಗೆ ವರದಿಗಳು – ಉನ್ನತ ವಿಭಾಗೀಯ ನಿರ್ವಹಣೆಗೆ ವರದಿ ಮಾಡುವುದು – ಕಿರಿಯ ನಿರ್ವಹಣಾ ಮಟ್ಟದ ವರದಿಗಳು – ವರದಿಗಳ ಸಿದ್ಧತೆ – ನಿರ್ವಹಣೆಗಳಿಂದ ವರದಿಗಳ ಉಪಯೋಗ.

೮. **ಹಣಕಾಸಿನ ಕಾರ್ಯವಿಧಾನಗಳು:**

ಎ) ಪೀಠಿಕೆ: ಸರ್ಕಾರದ ಪಾತ್ರ, ಭದ್ರತಾ ಮಾರುಕಟ್ಟೆಗಳು, ಹಣಕಾಸಿನ ಸಂಸ್ಥೆಗಳು, ಮಾಲೀಕತ್ವ ರಚನೆ, ಸಂಕುಚಿಸುವ ಸಾಧನಗಳು, ಪೀಠಿಕೆ, ಸರ್ಕಾರದ ಕಾನೂನುಗಳು ಮತ್ತು ವಿನಿಯಮನಗಳು, ಭದ್ರತಾ ಮಾರುಕಟ್ಟೆಗಳು, ಮಾಲೀಕತ್ವದ ರಚನೆ, ಮಂಡಳಿಯ ಮೇಲ್ವಿಚಾರಣೆ, ಹಣಕಾಸು ಸಂಸ್ಥೆಗಳು, ಸಂಕುಚಿಸುವ ಸಾಧನಗಳು.

ಬಿ) ಹಣಕಾಸಿನ ಧೋರಣೆಗಳು ಮತ್ತು ಕಾರ್ಯವಿಧಾನಗಳು: ಪೀಠಿಕೆ, ಕೈಗಾರಿಕೆ ರಚನೆಯಲ್ಲಿ ಏಜೆಂಟ್ ಸಂಘರ್ಷಗಳು, ಕೈಗಾರಿಕೆಯಲ್ಲಿ ಪಾರದರ್ಶಕ ಆಸ್ತಿಯ ಚಲನೆಗಳು ಮತ್ತು

ಅತ್ಯುತ್ತಮ ವಿಧಾನಗಳು, ಕೈಗಾರಿಕಾ ಸ್ಪರ್ಧೆ ಮತ್ತು ಹಣಕಾಸು ಕಾರ್ಯವಿಧಾನಗಳ ಜಂಟಿ ಹೂಡಿಕೆಗಳು ಮತ್ತು ಕಾರ್ಯವಿಧಾನದ ಗುಣ ಸಾಧ್ಯತ್ವಗಳು.

ಸಿ) ಫರ್ಮ್‌ನ ಪರಿಸ್ಥಿತಿ, ಸರ್ಕಾರ, ಕಾರ್ಯವಿಧಾನ, ಕಾರ್ಯಚರಣೆಗಳು ಮತ್ತು ಆರ್ಥಿಕ ವ್ಯವಸ್ಥೆ: ಪೀಠಿಕೆ, ಫರ್ಮ್‌ಗಳ ವ್ಯವಹಾರ ಪರಿಸ್ಥಿತಿ, ಆಂತರಿಕ ಆಡಳಿತಗಳ ವ್ಯವಸ್ಥೆ ಮತ್ತು ವ್ಯವಹಾರ ಕಾರ್ಯವಿಧಾನ, ಕಾರ್ಯಕಾರಿ ವ್ಯವಸ್ಥೆ, ಹಣಕಾಸಿನ ವ್ಯವಸ್ಥೆ, ಫರ್ಮ್‌ನ ನಿರ್ವಹಣೆ, ನಷ್ಟಗಳು ಮತ್ತು ಸಾಧಿಲ್ವಾರುಗಳು, ನಷ್ಟಗಳ ಪ್ರಯೋಗ ಸಿದ್ಧ ವಿಶ್ಲೇಷಣೆ.

ಡಿ) ಖಾಸಗಿ ಸಾಮಾನ್ಯ ಮತ್ತು ಹೂಡಿಕೆ ಬಂಡವಾಳ: ಪೀಠಿಕೆ, ಮೌಲ್ಯೀಕರಿಸುವ ಮೂಲಾರಂಭಗಳು ಮತ್ತು ಹಣಕಾಸು ಹೂಡಿಕೆ, ಹೂಡಿಕೆ ಅಭಿವೃದ್ಧಿ ಮತ್ತು ಹಣಕಾಸಿನ ಹಂತಗಳು, ಬಂಡವಾಳ ಹೂಡಿಕೆ ಹಂತಗಳು ಫರ್ಮ್ ಹಣಕಾಸು ಒದಗಿಸುವುದು, ಬಂಡವಾಳ ಹೂಡಿಕೆ ಫರ್ಮ್‌ಗಳು (ವಿಸಿಎಸ್), ವಿವಾದಗಳಲ್ಲಿ ಏಜೆಂಟ್‌ನಲ್ಲಿ ವಿವಿಧ ಹಂತದ ಪಾತ್ರಗಳು ಮತ್ತು ವಿಸಿ ಮೇಲ್ವಿಚಾರಣೆ.

ಇ) ಪ್ರಾರಂಭಿಕ ಸಾರ್ವಜನಿಕ ನೀಡಿಕೆಗಳು ಮತ್ತು ಕಾಲಿಕ ಸಾಮಾನ್ಯ ನೀಡಿಕೆಗಳು: ಪೀಠಿಕೆ, ಖಾಸಗಿ ಮತ್ತು ಚಾಲ್ತಿ ಸಾರ್ವಜನಿಕ ಅಸ್ತಿತ್ವ, ಪ್ರಾರಂಭಿಕ ಸಾರ್ವಜನಿಕ ನೀಡಿಕೆಗಳ ಕಾರ್ಯವಿಧಾನ, ಪ್ರಾರಂಭಿಕ ಸಾರ್ವಜನಿಕ ನೀಡಿಕೆಗಳ ಫರ್ಮುಗಳ ವೈಶಿಷ್ಟ್ಯತೆಗಳು ಮತ್ತು ಅವುಗಳ ನೀಡಿಕೆಗಳು, ಸ್ಟಾಕ್ ನಿರ್ವಹಣೆಯ ಮೊದಲಿನ ಪ್ರಾರಂಭಿಕ ಸಾರ್ವಜನಿಕ ನೀಡಿಕೆಗಳ ನೆರವೇರಿಕೆ, ಪ್ರಾರಂಭಿಕ ನೀಡಿಕೆಗಳ ಘಟಕ, ನೀಡಿಕೆಯ ಕಾಲಿಕ ಸಾಮಾನ್ಯಸ್ವಯತೆಗಳ ಕಾರ್ಯವಿಧಾನ, ಎಸ್‌ಇಒ ನಲ್ಲಿ ಷೇರುದಾರರ ವಿಸ್ತರಿಸಿದ ನಿರ್ಧಾರಗಳು, ಎಸ್‌ಇಒ ಮೌಲ್ಯನಿರ್ಣಯ ಪರಿಣಾಮದ ಸಿದ್ಧಾಂತ ಮತ್ತು ಸಾಕ್ಷ್ಯ, ಎಸ್‌ಇಒ ಗಳಿಗೆ ಸಂಬಂಧಪಟ್ಟ ಇತರ ಅಂಶಗಳು.

(VI) ಪತ್ರಿಕೆ- VI ನಿರ್ವಹಣಾ ಸಿದ್ಧಾಂತಗಳು, ಸಂಘಟನಾ ನಡವಳಿ, ತರಬೇತಿ ಮತ್ತು ಅಭಿವೃದ್ಧಿ

ಎಫ್. ನಿರ್ವಹಣಾ ಪರಿಕಲ್ಪನೆಗಳು ಮತ್ತು ತತ್ವಗಳು

ಎ) ನಿರ್ವಹಣೆ: – ನಿರ್ವಹಣೆಯ ಪರಿಭಾಷೆ, ಸ್ವರೂಪ ಮತ್ತು ವ್ಯಾಪ್ತಿ, ನಿರ್ವಹಣೆಯ ಪ್ರಕಾರ್ಯಗಳು – ಟೇಲರ್‌ನಿಂದ ನಿರ್ವಹಣಾ ಸಿದ್ಧಾಂತಗಳ ಮೌಲ್ಯ ನಿರ್ಣಯ, ಪ್ರಸ್ತುತ ಫಾಯಲ್‌ವರೆಗೆ. ನಿರ್ವಹಣಾ ಚಿಂತನಾ ನಿರ್ವಹಣಾ ಶಾಲೆಗಳು, ಭಾರತದಲ್ಲಿ ವೃತ್ತಿಪರ ನಿರ್ವಹಣಾ ಮೌಲ್ಯನಿರ್ಣಯ, ನೀತಿ ನಿರ್ವಹಣೆ.

ಬಿ) ನಿರ್ವಹಣಾ ಯೋಜನೆ ರೂಪಿಸುವುದು.- ಯೋಜನೆಯ ಪರಿಭಾಷೆ, ಯೋಜನೆಯ ಕಾರ್ಯವಿಧಾನ, ಯೋಜನೆಗಳ ವಿಧಾನಗಳು, ಯೋಜನಾ ವ್ಯವಸ್ಥೆ ಮತ್ತು ಕಾರ್ಯಾಚರಣಾ ಯೋಜನೆಗಳು, ಕಾರ್ಯವಿಧಾನ ರೂಪಿಸುವಿಕೆಯ ಮಾದರಿಗಳು, ತೀರ್ಮಾನಗಳನ್ನು ಮಾಡಲು ಸಂಬಂಧಪಟ್ಟ ಕಾರ್ಯವಿಧಾನಗಳು, ನಿರ್ಧಾರಣಾ ಮಾದರಿಗಳು, ಕ್ರಿಯಾಶೀಲತೆ ಮತ್ತು ಸಮೂಹ ನಿರ್ಧಾರ ಮಾಡುವುದು.

ಸಿ) ಸಂಘಟನಾ ತತ್ವಗಳು ಮತ್ತು ವಿನ್ಯಾಸ. ಸಮನ್ವಯ ಸಿದ್ಧಾಂತಗಳು, ಪ್ರಾಧಿಕಾರ, ಅಧಿಕಾರ, ಪ್ರತ್ಯಾಯೋಜನೆ ಮತ್ತು ವಿಕೇಂದ್ರೀಕರಣ.- ಸಂಘಟನಾ ಬದಲಾವಣೆಗಳು ಮತ್ತು ಅಭಿವೃದ್ಧಿಯ ಶೈಲಿಗಳು.

ಡಿ) ಪ್ರೇರಣೆ.– ಪರಿಭಾಷೆ – ಸಾಧನೆ ಪ್ರೇರಣೆಯ ಪ್ರೇರಣಾ ಪರಿಕಲ್ಪನೆಯ ಸಿದ್ಧಾಂತಗಳು ಮತ್ತು ವಿಧಾನಗಳು. ನಾಯಕತ್ವ ಪರಿಭಾಷೆ, ನಾಯಕತ್ವ ಪರಿಕಲ್ಪನೆಯ ನಾಯಕತ್ವದ ಸಿದ್ಧಾಂತಗಳು ಮತ್ತು ನಿರ್ವಹಣಾ ಶೈಲಿಗಳು.

ಇ) ನಿರ್ವಹಣಾ ನಿಯಂತ್ರಣ.– ನಿಯಂತ್ರಣ ಸಂಬಂಧದ ನಡುವೆ ಯೋಜನೆ ಮತ್ತು ನಿಯಂತ್ರಣದ ನಡುವಿನ ಪರಿಮಿತಿಗಳು, ನಿಯಂತ್ರಣ ವ್ಯವಸ್ಥೆಯ ಮಾದರಿಗಳು ಮತ್ತು ತಂತ್ರಗಳು – ವಿನಾಯಿತಿಯಿಂದ ನಿರ್ವಹಣೆ, ಆಯವ್ಯಯ ನಿಯಂತ್ರಣ – ಶೂನ್ಯ ಮಟ್ಟದ ಆಯವ್ಯಯ – ಆಯವ್ಯಯ ನಿಯಂತ್ರಣದ ಪ್ರಕಾರ್ಯ ಮತ್ತು ಅಪ ಸಾಮಾನ್ಯ ಪ್ರಕಾರ್ಯದ ಅಂಶಗಳು, ಆಂತರಿಕ ನಿಯಂತ್ರಣ ವ್ಯವಸ್ಥೆ, ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿರ್ವಹಣಾ ಲೆಕ್ಕಪರಿಶೋಧನೆ.

ಎಫ್) ವಸ್ತು ನಿಷ್ಠಗಳ ಮೂಲಕ ನಿರ್ವಹಣೆ (ಎಂಬಿಓ), ವಿನಾಯಿತಿ ಮೂಲಕ ನಿರ್ವಹಣೆ (ಎಂಬಿಇ) ಮತ್ತು ಬಿಕ್ಕಟ್ಟು ನಿರ್ವಹಣೆ (ಎಂಬಿಸಿ), ಅದರ ಕಾರ್ಯವಿಧಾನ, ಪ್ರಯೋಜನಗಳು ಮತ್ತು ಪರಿಮಿತಿಗಳು (ಎಂಬಿಓ, ಎಂಬಿಇ)

## ಜಿ. ಮಾನವ ಸಂಪನ್ಮೂಲ ನಿರ್ವಹಣೆ

ಎ) ಮಾನವ ಸಂಪನ್ಮೂಲ ನಿರ್ವಹಣೆ: ಮಾನವ ಸಂಪನ್ಮೂಲ ವಿಭಾಗ ಮತ್ತು ಸಿಬ್ಬಂದಿ ಪ್ರಕಾರ್ಯಗಳು, ಮಾನವ ಸಂಪನ್ಮೂಲ ನಿರ್ವಹಣೆಯ ಮರು ನಿರ್ಧಾರಕ ಪಾತ್ರ ಮತ್ತು ಹೊಣೆಗಾರಿಕೆಗಳು, ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ವಿಭಾಗದ ಉಪ–ವ್ಯವಸ್ಥೆ, ಮಾನವ ಸಂಪನ್ಮೂಲ ಪ್ರಕಾರ್ಯಗಳು ಮತ್ತು ಧೋರಣೆಗಳು, ಮಾನವ ಸಂಪನ್ಮೂಲ ನಿರ್ವಹಣಾ ಸಂಘಟನೆ, ಭಾರತದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆಯ ಅಭಿವೃದ್ಧಿ, ಮಾನವ ಸಂಪನ್ಮೂಲ ವ್ಯವಸ್ಥೆಯಲ್ಲಿ ಇತ್ತೀಚಿನ ಧೋರಣೆಗಳು, ಮಾನವ ಸಂಪನ್ಮೂಲ ವ್ಯವಸ್ಥೆಯಲ್ಲಿ ಜಾಗತೀಕರಣದ ಪರಿಣಾಮ, ವಲಯ 1ರಲ್ಲಿ ವಲಯದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆಯ ಪಾತ್ರ.

ಬಿ) ಮಾನವ ಸಂಪನ್ಮೂಲ ಯೋಜನೆ, ನೇಮಕಾತಿ ಮತ್ತು ಆಯ್ಕೆ: ವಿವಿಧ ಮಟ್ಟಗಳಲ್ಲಿ ಮಾನವ ಸಂಪನ್ಮೂಲಗಳ ವಿಭಾಗ, ಕೆಲಸದ ವಿವರಣೆ, ಮೂಲ, ಪರೀಕ್ಷೆಗಳ ಸಂದರ್ಶನಗಳು, ಪ್ರವೇಶಾತಿ ಮತ್ತು ಅಭಿಸಂಸ್ಕರಣಾ ತರಬೇತಿಯ ತರಬೇತಿ ವಿಧಾನಗಳು, ಐಎಸ್‌ಓ ಮತ್ತು ಕ್ಯೂಎಸ್ ಅಡಿಯಲ್ಲಿ ತರಬೇತಿ ಕೈಪಿಡಿ ತರಬೇತಿ, ಪ್ರಮಾಣೀಕರಣ, ಮೇಲ್ವಿಚಾರಣೆ, ಕಾರ್ಯನಿರ್ವಹಣೆ ಮತ್ತು ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮ, ಶೀಘ್ರ ಅಭಿವೃದ್ಧಿ.

ಸಿ) ವ್ಯವಸ್ಥಾಪನೆ ನಿರ್ವಹಣೆ: ಉದ್ಯೋಗ ವಿಶ್ಲೇಷಣೆ, ಉದ್ಯೋಗ ಮೌಲ್ಯ ನಿರ್ಣಯ, ಕೆಆರ್‌ಎ ಮತ್ತು ಕೆಪಿಎ ಗಳ ಸಾಂಪ್ರದಾಯಿಕ ಮತ್ತು ಆಧುನಿಕ ವಿಧಾನಗಳ ವ್ಯವಸ್ಥಾಪನಾ ನಿರ್ವಹಣೆ, ಸಂಭಾವ್ಯ ಮೌಲ್ಯನಿರ್ಣಯ, ಪ್ರತಿಕ್ರಿಯೆ ವ್ಯವಸ್ಥೆ.

ಡಿ) ನಷ್ಟ ಪರಿಹಾರ ಯೋಜನೆ: ಮಜೂರಿಗಳು ಮತ್ತು ಸಂಬಳ, ಆಡಳಿತ, ಪರ್ಕ್ಸ್ ಫ್ರಿಂಗ್, ಪ್ರಯೋಜನಗಳು, ಲಾಭಾಂಶ, ಪ್ರೋತ್ಸಾಹಧನ, ನಷ್ಟಪರಿಹಾರ, ಸಮೀಕ್ಷೆಗಳ ಉತ್ಪಾದಕತೆ, ನಿರ್ವಹಣೆಗೆ ಸಂಬಂಧಿಸಿದ ವೇತನ ರಚನೆ, ನಷ್ಟ ಪರಿಹಾರ ಪುನರಾವಲೋಕನೆ ಮತ್ತು ರಚನೆ.

ಇ) ಕೈಗಾರಿಕಾ ಸಂಬಂಧಗಳು: ವ್ಯಾಪಾರ ಸಂಘಟನೆಗಳು, ಕೈಗಾರಿಕಾ ವಿವಾದಗಳು ಮತ್ತು ಇತ್ಯರ್ಥಗಳು, ಕುಂದುಕೊರತೆಗಳ ನಿರ್ವಹಣೆ, ಶಿಸ್ತುಕ್ರಮದ ಪ್ರಕ್ರಿಯೆಗಳು, ಅಮಾನತು, ವಜಾ, ಗೃಹಕೃತ್ಯ, ವಿಚಾರಣೆ, ಕಾನೂನು ಸಮ್ಮತ ಔಪಚಾರಿಕತೆಗಳು, ಕೆಲಸಗಾರರನ್ನು

ಹಂಗಾಮಿಯಾಗಿ ತೆಗೆದು ಹಾಕುವುದು ಮತ್ತು ಮುಚ್ಚುವುದು, ವಿಆರ್‌ಎಸ್‌ ಆರೋಗ್ಯ ಮತ್ತು ಭದ್ರತೆ.

**ಹೆಚ್. ತರಬೇತಿ ಮತ್ತು ಅಭಿವೃದ್ಧಿ:**

ಎ) ತರಬೇತಿ: ಪೀಠಿಕೆ, ತರಬೇತಿಯ ಪ್ರಾಮುಖ್ಯತೆ, ತರಬೇತಿಯ ಅನುಕೂಲಗಳು, ತರಬೇತಿಯ ಸವಾಲುಗಳು, ಬದಲಾಗುತ್ತಿರುವ ಕೆಲಸದ ಸ್ಥಳ ಮತ್ತು ಕೆಲಸದ ತಂಡ, ಮಾನವ ಸಂಪನ್ಮೂಲ ವಿಭಾಗದ ಉಪವ್ಯವಸ್ಥೆಯ ತರಬೇತಿ, ಕಲಿಕಾ ಪರಿಸರ, ಬೋಧನೆಯ ರೂಪುರೇಷೆ, ಕಲಿಕಾ ಫಲಿತಾಂಶಗಳು, ಪ್ರತಿಕ್ರಿಯೆ, ವರ್ಗಾವಣೆಯ ಪರತ್ತುಗಳು, ತರಬೇತಿ ಯೋಜನೆಯ ಪರಿವರ್ತನಾ ತರಬೇತಿ ವಿಷಯಗಳು.

ಬಿ) ಗೊತ್ತುಪಡಿಸುವ ತರಬೇತಿ ಅಗತ್ಯತೆಗಳು: ತಿಳಿದುಕೊಳ್ಳುವ ತರಬೇತಿ ಅಗತ್ಯತೆಗಳ ವಿಧಾನಗಳು, ಟಿಎನ್‌ಎ ಯ ಸಂಘಟನಾ ಬೆಂಬಲ, ಸಂಘಟನೆಯ ವಿಶ್ಲೇಷಣೆಗಳು, ನಿರ್ದಿಷ್ಟಪಡಿಸುವ ಗುರಿಗಳು, ಗುರುತಿಸುವ ನಿರ್ಬಂಧಗಳು, ಸಂಪನ್ಮೂಲಗಳ ವಿಶ್ಲೇಷಣೆಗಳು, ಕಲಿಕಾ ಸಿದ್ಧಾಂತಗಳು, ತರಬೇತಿಯ ಹೆಚ್ಚಳ.

ಸಿ) ತರಬೇತಿಯನ್ನು ಕೊಡುವುದು: ಸಾಂಪ್ರದಾಯಿಕ ಮತ್ತು ಆಧುನಿಕ ವಿಧಾನಗಳು, ಎಸ್‌ಎಲ್‌ಡಿಪಿ, ಅನುಕರಿಸಲಾದ ಕೆಲಸವನ್ನು ನಿರೂಪಿಸುವಿಕೆಗಳು, ಡಿಎಲ್‌ಪಿ, ಸಿಡಿ ಆರ್‌ಓಎಂ, ಪ್ರಭಾವ ಬೀರುವ ಬಹು ಮಾಧ್ಯಮ, ವೆಬ್ ಆಧಾರಿತ ಬೋಧನೆಗಳು, ಆದ್ಯತೆಯ ತರಬೇತಿ ಹೆಚ್ಚಳದ ವ್ಯವಸ್ಥೆಗಳು (ಐಟಿಎಸ್), ವಸ್ತುತಃ ವಾಸ್ತವ ಸ್ಥಿತಿಯ ತರಬೇತಿ (ವಿಆರ್‌ಟಿ).

ಡಿ) ತರಬೇತಿ ಮೌಲ್ಯನಿರ್ಣಯ:- ಮಾನದಂಡ, ಮಾನದಂಡದ ಮೌಲ್ಯನಿರ್ಣಯ, ಮಾನದಂಡದ ಪ್ರಮಾಣಗಳು, ಪ್ರಾಯೋಗಿಕ ರಚನೆಗಳ ಬಳಕೆ, ಸದೃಶವಾದ ಪ್ರಾಯೋಗಿಕ ರಚನೆಗಳು, ಉಪಯುಕ್ತತಾ ಸಂರಕ್ಷಣೆ, ವೈಯಕ್ತಿಕ ಭಿನ್ನತಾ ಮಾದರಿಗಳು, ವಿಷಯ ಸಿಂಧುತ್ವ ಮಾದರಿ, ಸಾಂಖ್ಯಿಕ ವಿಧಾನ.

ಇ) ತರಬೇತಿಯ ಹಸ್ತಕ್ಷೇಪ:- ಕಲಿಕಾ ಅನುಭವ ಮತ್ತು ಸಂಘಟನಾ ಸಾಮರ್ಥ್ಯದ ಹೆಚ್ಚಳ, ಉದ್ಯೋಗಿಯ ಸಾಮರ್ಥ್ಯ, ಉಮೇದುದಾರಿಕೆ, ಸಂಪರ್ಕ ಕಲ್ಪಿಸುವಿಕೆ, ಆವರಿತ ತರಬೇತಿ

ತಂಡದ ಹೆಚ್ಚಳದ ಎದುರು ಮತ್ತು ಆಂತರಿಕ ಸ್ಥಾನಮಾನದ ತರಬೇತಿ, ನಾಯಕತ್ವ ತರಬೇತಿ.

ಐ. ಸಂಘಟನೆ ಮತ್ತು ನಡವಳಿಕೆ:-

ಎ) ಮೂಲಭೂತ ಸಂಘಟನೆ – ಜನತೆಯ ಮತ್ತು ಸಂಘಟನೆಗಳ ಸ್ವರೂಪ, ಸಂಘಟನಾ ನಡವಳಿಕೆಗೆ ಪ್ರಭಾವ ಬೀರುವ ಪ್ರಭಾವಗಳು, ಕೆಲಸದ ಬದಲಾವಣೆ ಪ್ರಭಾವ ಮತ್ತು ಉದ್ಯೋಗ ಸಂಬಂಧಗಳು, ಜಾಗತೀಕರಣದ ಪರಿಣಾಮ ಮತ್ತು ಸಂಘಟನಾ ನಡವಳಿಯ ಮೇಲೆ ಮಾಹಿತಿ ತಂತ್ರಜ್ಞಾನ, ಸಂಘಟನಾ ಸಂದರ್ಭ ಮತ್ತು ಸಂಸ್ಕೃತಿ.

ಬಿ) ವೈಯಕ್ತಿಕ ಭಿನ್ನತೆಗಳು – ಗ್ರಹಿಕೆಗಳು, ಆಸಕ್ತಿಗಳು, ಅಭಿರುಚಿಗಳು, ಮನೋಭಾವಗಳು, ವ್ಯಕ್ತಿತ್ವ ಸಿದ್ಧಾಂತಗಳು.

ಸಿ) ಕಲಿಕೆ:- ಕಲಿಕಾ ನಿರೀಕ್ಷಣಗಳ ಸಿದ್ಧಾಂತಗಳು ಮತ್ತು ಕಲಿಕೆಯನ್ನು ಗ್ರಹಿಸುವ ಮ್ಯಾಡ್ಯೂಲುಗಳು, ಕಲಿಕೆಯ ಸಂಘಟನೆಗಳು ಮತ್ತು ಸಂಘಟನಾ ಬದಲಾವಣೆ – ಬದಲಾವಣೆ ಪ್ರತಿರೋಧ ಮತ್ತು ಬದಲಾವಣೆ ಏಜೆಂಟುಗಳು, ಪರಿಣಾಮಕಾರಿ ಸಂಘಟನೆಗಳ ರಚನೆ.

ಡಿ) ಗುಂಪುಗಳು ಮತ್ತು ಕ್ರಿಯಾತ್ಮಕ ಗುಂಪು, ಗುಂಪು ವರ್ತನೆ, ಗುಂಪಿನ ಕ್ರಿಯಾತ್ಮಕ ಸಿದ್ಧಾಂತಗಳು ಮತ್ತು ಗುಂಪಿನ ಒಗ್ಗಟ್ಟು, ಗುಂಪು ನಿರ್ಣಯ ಮಾಡುವ ಕಾರ್ಯವಿಧಾನ, ತಿಳುವಳಿಕೆ ಕೆಲಸದ ತಂಡಗಳು, ತಂಡ ಮತ್ತು ಗುಂಪುಗಳು, ಪರಿಣಾಮಕಾರಿ ತಂಡಗಳ ತಂಡ ಅಭಿವೃದ್ಧಿ ಘಟಕಗಳು, ತಂಡ ಜೀವನ ಚಕ್ರ, ವ್ಯಕ್ತಿಗಳ ನಡುವಣ ಕೌಶಲಗಳು – ಜೋಹಾರಿ ವಿಂಡೋಗಳು ಮತ್ತು ಭಾಷಾಂತರ ವಿಶ್ಲೇಷಣೆಗಳು.

ಇ) ಒತ್ತಡ ನಿರ್ವಹಣೆ:- ಉದ್ಯೋಗ ಪೂರೈಕೆ, ಪರಿಣಾಮಕಾರಿ ಉದ್ಯೋಗಗಳನ್ನು ಸೃಜಿಸುವುದು, ಹುದ್ದೆಗಳು, ಕ್ರಮಬದ್ಧವಾದ ಸರದಿ, ಕೆಲಸ ಪ್ರಮಾಣವನ್ನು ಹೆಚ್ಚಿಸುವುದು ಮತ್ತು ಮರು ಎಂಜಿನಿಯರಿಂಗ್ ಕೆಲಸದ ಕಾರ್ಯವಿಧಾನ, ಒತ್ತಡದ ಮೂಲಗಳು, ಉತ್ಪಾದಕತೆಯಲ್ಲಿ ದಣಿವಿನ ಕೆಲಸ ಮತ್ತು ಅದರ ಪರಿಣಾಮ, ನಿಯೋಜಿತ ನೌಕರರನ್ನು ಕೌನ್ಸಿಲಿಂಗ್ ಮಾಡುವುದು.

ಜೆ. ಮಾರುಕಟ್ಟೆ ನಿರ್ವಹಣೆ:

ಎ) **ಮಾರುಕಟ್ಟೆಯ ನಿರ್ವಹಣೆಯ ಪ್ರಸ್ತಾವನೆ:-** ಉತ್ಪಾದನೆಗಳು/ ಸೇವೆಗಳ ಮಾರುಕಟ್ಟೆ ನಿರ್ವಹಣಾ ವಿಧಾನಗಳ ಸ್ವರೂಪ, ಮಾರುಕಟ್ಟೆ ಪರಿಕಲ್ಪನೆಗಳು, ಉತ್ಪನ್ನ, ಉತ್ಪಾದನೆ, ಮಾರಾಟ ಮಾರುಕಟ್ಟೆ ಮತ್ತು ಸಾಮಾಜಿಕ ಮತ್ತು ಮಾರುಕಟ್ಟೆ ವ್ಯತ್ಯಾಸಗಳು, ಮಾರುಕಟ್ಟೆ ಪರಿಸರ-ಸೂಕ್ಷ್ಮ ಮತ್ತು ಬೃಹತ್ ಪರಿಸರ

ಬಿ) **ಮಾರುಕಟ್ಟೆ ವರ್ಗೀಕರಣ ಮತ್ತು ಗುರಿ:-** ವರ್ಗೀಕರಣ ಮತ್ತು ಗುರಿಯ ಪರಿಕಲ್ಪನೆ, ವರ್ಗೀಕರಣದ ಮೂಲಗಳು, ಗ್ರಾಹಕ ಮತ್ತು ಕೈಗಾರಿಕಾ ಉತ್ಪನ್ನಗಳ ವರ್ಗೀಕರಣ, ಉತ್ಪನ್ನದ ಸ್ಥಿತಿಗತಿ, ಗ್ರಾಹಕ ಮತ್ತು ವ್ಯಾಪಾರ ಖರೀದಿದಾರನ ವರ್ತನೆ ಮತ್ತು ಖರೀದಿ ಪಾತ್ರಗಳು, ಖರೀದಿ ಕಾರ್ಯವಿಧಾನ, ರೀತಿ.

ಸಿ) **ಮಾರುಕಟ್ಟೆ ಮಿಶ್ರಣ:-** ಪದಾರ್ಥಗಳು – ಉತ್ಪನ್ನ, ಬೆಲೆಗಳು, ಸಂವರ್ಧನೆ, ವಿತರಣೆ, ಉತ್ಪನ್ನ, ಮಿಶ್ರಣ, ಮತ್ತು ಉತ್ಪನ್ನದ ರೀತಿ – ಉತ್ಪನ್ನದ ಹಂತಗಳು, ಹೊಸ ಉತ್ಪನ್ನದ ಅಭಿವೃದ್ಧಿ, ಉತ್ಪನ್ನದ ಪ್ರಾರಂಭ ಆವರ್ತಗಳ ಕಾರ್ಯವಿಧಾನಗಳು, ಮುದ್ರೆ ಹಾಕುವುದು, ಪ್ಯಾಕ್ ಮಾಡುವುದು, ಲೇಬಲ್ ಅಂಟಿಸುವುದು, ಬೆಲೆ ನಿರ್ಧಾರ – ಸಾಮಾನ್ಯ ಬೆಲೆ ನಿರ್ಧಾರದ ಪ್ರಸ್ತಾವನೆಗಳು, ಹೊಸ ಉತ್ಪನ್ನದ ಬೆಲೆ ನಿರ್ಧಾರದ ಕಾರ್ಯವಿಧಾನಗಳು, ಸಾರ್ವಜನಿಕ ನೀತಿ ಮತ್ತು ಬೆಲೆ ನಿರ್ಧಾರ.

ಡಿ) **ಸಂವರ್ಧನೆ ಮತ್ತು ಸ್ಥಳ ಕೂಡಿಸುವಿಕೆ:-** ಸಂವರ್ಧನೆ ಮಿಶ್ರಣದ ಘಟಕಗಳು, ಮಾರುಕಟ್ಟೆ ಸಂಪರ್ಕ, ಪ್ರಚಾರ, ಜಾಹೀರಾತು, ಸಾರ್ವಜನಿಕ ಸಂಬಂಧಗಳು, ವೈಯಕ್ತಿಕ ಮಾರಾಟ ಮತ್ತು ಮಾರಾಟಗಳ ಸಂವರ್ಧನೆ, ನೇರ ಮತ್ತು ಆನ್‌ಲೈನ್ ಮಾರುಕಟ್ಟೆ, ವಿತರಣೆಯ ವಿಧಾನಗಳು ಮತ್ತು ವ್ಯವಸ್ಥಾಪನ ತಂತ್ರಗಳ ನಿರ್ವಹಣೆ, ವಿಧಾನಗಳ ರಚನೆ ಮತ್ತು ಆಡಳಿತ, ಸಾರ್ವಜನಿಕ ನೀತಿ ಮತ್ತು ವಿತರಣೆ ಮತ್ತು ನಿರ್ಧಾರಗಳು.

ಇ) **ಮಾರುಕಟ್ಟೆ ಮಾಹಿತಿ ವ್ಯವಸ್ಥೆ:-** ಮಾರುಕಟ್ಟೆ ಮಾಹಿತಿ ವ್ಯವಸ್ಥೆಯ ಪರಿಕಲ್ಪನೆಗಳು, ಮಾರುಕಟ್ಟೆ ಸಂಶೋಧನಾ ಕಾರ್ಯವಿಧಾನಗಳು, ಮಾರುಕಟ್ಟೆ ಮಾಹಿತಿ ವ್ಯವಸ್ಥೆ, ಮಾರುಕಟ್ಟೆ ಮಾಹಿತಿ ವ್ಯವಸ್ಥೆಯ ಘಟಕಗಳು, ಆಂತರಿಕ ದಾಖಲೆಗಳ ವ್ಯವಸ್ಥೆ-ಮಾರುಕಟ್ಟೆ ನಿರ್ಧಾರದ ಪೂರಕ ವ್ಯವಸ್ಥೆ.

**ಕೆ. ತಪಶೀಲು ಪಟ್ಟಿ ನಿರ್ವಹಣೆ ಮತ್ತು ವಿಶ್ಲೇಷಣೆ:–**

ಎ) ಕಾರ್ಪೋರೇಟ್ ಉದ್ದೇಶಗಳು: ಕಾರ್ಪೋರೇಟ್ ಉದ್ದೇಶಗಳ ಮೇಲೆ ಪ್ರತಿಪಾದನೆಗಳು – ಕಾರ್ಪೋರೇಷನ್ ಉದ್ದೇಶಗಳ ಪರಿಭಾಷೆಯ ನಿಷ್ಪತ್ತಿ.

ಬಿ) ನಿಶ್ಚಿತತೆ ಅಡಿಯಲ್ಲಿ ಬಂಡವಾಳ ಆಯವ್ಯಯ ನಿರ್ಧಾರಗಳು:– ಸಾಂಪ್ರದಾಯಿಕ ತಂತ್ರಗಳು–ಡಿಸಿಎಫ್ ಮಾನದಂಡ – ಮರು ಹೂಡಿಕೆ, ಬಹುವಿಧದ ಐಆರ್‌ಆರ್‌ಗಳ ಪರಿಗಣನೆಗಳ – ಪ್ಯಾರಡಕ್ಸ್, ಬಂಡವಾಳ ಹಂಚಿಕೆ ಮೇರೆಗೆ ಗಣಿತ ಕಾರ್ಯ ನಿರ್ವಹಣೆ ಮತ್ತು ಬಂಡವಾಳ ಯೋಜನೆಗಳ ಮೇರೆಗೆ ಬಂಡವಾಳ ಯೋಜನೆಗಳ ಆಯ್ಕೆ.

ಸಿ) ಅನಿಶ್ಚಿತತೆಯ ಮೇರೆಗೆ ಬಂಡವಾಳ ಆಯವ್ಯಯ ನಿರ್ಧಾರದ ವಿಶ್ಲೇಷಣೆ: ಅನಿಶ್ಚಿತತೆ ಮತ್ತು ಸಂಭವನಿಯತೆಗಳು: ಎನ್‌ಪಿವಿಯ ಅಂಕಿ–ಅಂಶ ಮಾನದಂಡಗಳು – ಯೋಜನಾ ಸಂಯೋಜನೆಗಳ ಅಂಕಿ–ಅಂಶದ ಮಾನದಂಡಗಳು.

ಡಿ) ಅನಿಶ್ಚಿತತೆಯ ಮೇರೆಗೆ ಬಂಡವಾಳ ಆಯವ್ಯಯ ನಿರ್ಧಾರಗಳ ಮೌಲ್ಯನಿರ್ಣಯ: ನಿರೀಕ್ಷಿತ ಆಧಾರ ಕಲ್ಪನೆ – ಎಂದರೆ, ವ್ಯತ್ಯಾಸದ ವಿಚಾರ.

ಇ) ಪೋರ್ಟ್‌ಪೋಲಿಯೋ (ಬಂಡವಾಳಗಳ ಪಟ್ಟಿ) ಸಿದ್ಧಾಂತ: ಬಂಡವಾಳ ಪೋರ್ಟ್‌ಪೋಲಿಯೋ ಆಯ್ಕೆಗಾಗಿ ಮಾರ್ಕೋವಿಲಿಜ್ ಮಾದರಿ – ಶಾರ್ಪ್‌ಗಳ ಡೈಗೋನಲ್ ಮಾಡಲ್ – ಪ್ರೋಗ್ರಾಮಿಂಗ್ ಮಾಡಲ್

**ಎಲ್. ಉದ್ಯಮ ಅಭಿವೃದ್ಧಿ ಮತ್ತು ಯೋಜನಾ ನಿರ್ವಹಣೆ:**

೧. ಯೋಜನೆಯ ನಿರ್ವಹಣೆ: ಮೂಲ ಪರಿಕಲ್ಪನೆಗಳ ಪರಿಭಾಷೆ, ಯೋಜನೆ ರೂಪಿಸುವಿಕೆ ಮತ್ತು ನಿರ್ವಹಣೆ, ಯೋಜನೆ ನಿರ್ವಹಣೆಯ ಮೂಲ ತತ್ವಗಳು, ಯೋಜನೆಯ ಜೀವನಚಕ್ರ, ವಿಚಾರದ ಉಗಮ, ಸಾಧ್ಯತಾ ಅಧ್ಯಯನಗಳು, ಯೋಜನಾ ನಿರ್ವಹಣೆ ಮತ್ತು ಪ್ರಾಜೆಕ್ಟ್ ನಿರ್ವಹಣಾ ಸಂಸ್ಥೆ (ಪಿ.ಎಂ.ಐ) ಯ ತಿಳುವಳಿಕೆ, ಕೈಪಿಡಿಯ ಪ್ರಾಜೆಕ್ಟ್ ನಿರ್ವಹಣಾ ಸಂಸ್ಥೆಯನುಸಾರ ಅನುಷ್ಠಾನ.

ಬಿ. ಯೋಜನೆ ರೂಪಿಸುವಿಕೆ: ಪ್ರಾಜೆಕ್ಟ್ ಸಂಯೋಜನೆಯ ನಿರ್ವಹಣೆ – ಯೋಜನೆ ಶಕ್ತಿ, ಕಾರ್ಯನಿರ್ವಹಣೆ, ಬದಲಾವಣೆಯ ನಿಯಂತ್ರಣ. ಯೋಜನಾ ವ್ಯಾಪ್ತಿಯ ನಿರ್ವಹಣೆ – ಪ್ರಾರಂಭ. ಯೋಜನೆಯನ್ನು ರೂಪಿಸುವುದು. ವ್ಯಾಪ್ತಿ. ಪರಿಭಾಷೆ. ಸತ್ಯಾಪನೆ. ವ್ಯಾಪ್ತಿ ಬದಲಾವಣೆಯ ನಿಯಂತ್ರಣ. ಪ್ರಾಜೆಕ್ಟ್ ಕಾಲಿಕಾ ನಿರ್ವಹಣೆ. ಚಟುವಟಿಕೆಯ ಪರಿಭಾಷೆ. ಅನುಕ್ರಮತೆ. ಕಾಲಾವಧಿಯ ಅಂದಾಜು ಮಾಡುವುದು. ಸಮಯವನ್ನು ನಿಗದಿಪಡಿಸುವುದು ಮತ್ತು ನಿಯಂತ್ರಿಸುವುದು. ಪ್ರಾಜೆಕ್ಟ್ ವೆಚ್ಚ ನಿರ್ವಹಣೆ. ಪ್ರಾಜೆಕ್ಟ್ ಗುಣಮಟ್ಟ ನಿರ್ವಹಣೆ. ಪ್ರಾಜೆಕ್ಟ್ ಮಾನವ ಸಂಪನ್ಮೂಲ ನಿರ್ವಹಣೆ. ಪ್ರಾಜೆಕ್ಟ್ ನಷ್ಟ ನಿರ್ವಹಣೆ. ಪ್ರಾಜೆಕ್ಟ್ ಸಂಗ್ರಹಣೆ ನಿರ್ವಹಣೆ.

ಸಿ. ಯೋಜನಾ ಮೇಲ್ವಿಚಾರಣಾ ಮೌಲ್ಯನಿರ್ಣಯ ಮತ್ತು ನಿಯಂತ್ರಣ: ಪ್ರಾಜೆಕ್ಟ್ ಸಂಪರ್ಕ ಕಲ್ಪಿಸುವ ತಂತ್ರಜ್ಞಾನಗಳು, ಮೇಲ್ವಿಚಾರಣೆ ಮತ್ತು ಮೌಲ್ಯನಿರ್ಣಯಕ್ಕಾಗಿ ಯೋಜನೆಯನ್ನು ರೂಪಿಸುವುದು. ಪ್ರಾಜೆಕ್ಟ್ ರಚನೆ. ಪ್ರಾಜೆಕ್ಟ್‌ನ ಲೆಕ್ಕಪರಿಶೋಧನೆ. ಪ್ರಾಜೆಕ್ಟ್ ನಿರ್ವಹಣಾ ಮಾಹಿತಿ ವ್ಯವಸ್ಥೆ. ಪ್ರಾಜೆಕ್ಟ್ ಸಮಯವನ್ನು ನಿಗದಿಪಡಿಸುವುದು. ಪಿ.ಇ.ಆರ್.ಟಿ ಮತ್ತು ಸಿ.ಪಿ.ಎಂ. ಯೋಜನೆಯ ಸಂಪರ್ಕ, ಪ್ರಾಜೆಕ್ಟ್ ಮುಂದಿನ ಪುನರಾವಲೋಕನಗಳು, ಪ್ರಾಜೆಕ್ಟ್ ಮುಕ್ತಾಯಗೊಳಿಸುವುದು.

ಡಿ. ಉದ್ಯಮ ಶೀಲತೆ: ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರ. ಉದ್ಯಮಶೀಲತೆಯ ಬೆಳವಣಿಗೆಗೆ ಉತ್ತೇಜಿಸುವ ಅಂಶಗಳು. ಭಾರತದಲ್ಲಿ ಉದ್ಯಮ ಶೀಲತೆಯ ಅಭಿವೃದ್ಧಿ. ಕುಟುಂಬ ನಿರ್ವಹಣಾ ವ್ಯಾಪಾರಗಳು ಮತ್ತು ಭಾರತದಲ್ಲಿ ಹೊಸ ತಲೆಮಾರಿನ ಉದ್ಯಮಿಗಳು. ಭಾರತದಲ್ಲಿ ಯಶಸ್ವಿ ಉದ್ಯಮಿಗಳ ವಿಷಯದ ಅಧ್ಯಯನ.

ಇ. ಉದ್ಯಮ ಶೀಲತೆಯ ಬೆಳವಣಿಗೆ: ಭಾರತದಲ್ಲಿ ಉದ್ಯಮ ಶೀಲತೆಯ ಬೆಳವಣಿಗೆಗಾಗಿ ಸಂಸ್ಥೆಯ ವಿಚಾರಣೆ. ವಿವಿಧ ಸಾಹಸೋದ್ಯಮ ಬಂಡವಾಳ ಪ್ರಮುಖಗಳು ಒದಗಿಸಿದ ಸಾಹಸದ್ಯೋಮ

ಬಂಡವಾಳ ಬೆಂಬಲ ಎಸ್.ಎಸ್.ಐ.ಸಿ, ಎಸ್.ಐ.ಡಿ.ಬಿ.ಐ, ಎಸ್.ಐ.ಎಸ್.ಐ ಮತ್ತು ಇತರೆ ಸಂಸ್ಥೆಗಳ ಪಾತ್ರ, ಉದ್ಯಮ ಶೀಲತೆಯ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರಗಳ ಪಾತ್ರ, ಆರ್ ಮತ್ತು ಡಿ ಸಂಸ್ಥೆಗಳು ಮತ್ತು ಭಾರತದಲ್ಲಿ ವಿಶ್ವವಿದ್ಯಾನಿಲಯಗಳು ಅಭಿವೃದ್ಧಿಪಡಿಸಿದ ತಂತ್ರಜ್ಞಾನದ ಬದಲಾವಣೆಗಳಲ್ಲಿನ ಸಮಸ್ಯೆಗಳು.

## ಪತ್ರಿಕೆ–VII

### ಕಾರ್ಪೊರೇಟ್ ಹಣಕಾಸು, ವ್ಯವಹಾರ ಅರ್ಥಶಾಸ್ತ್ರ ಮತ್ತು ತೆರಿಗೆ ವಿಧಿಸುವುದು

ಎಂ. ಕಾರ್ಪೊರೇಟ್ ಹಣಕಾಸು

ಎ. ಫರ್ಮ್‌ನ ಗುರಿ: ಲಾಭದ ಉನ್ನತೀಕರಣ ಮತ್ತು ಸಂಪತ್ತಿನ ಉನ್ನತೀಕರಣ, ಮೌಲ್ಯಸೃಷ್ಟಿ, ಏಜೆನ್ಸಿ ಸಮಸ್ಯೆಗಳು, ಸಾಮಾಜಿಕ ಹೊಣೆಗಾರಿಕೆ, ಹಣಕಾಸು ನಿರ್ವಹಣೆಯ ಪಾತ್ರ, ಹಣದ ಸಮಯ, ಮೌಲ್ಯ, ಭದ್ರತೆಗಳ ಮೌಲ್ಯನಿರ್ಣಯ, ಸ್ಟಾಕ್ ಮತ್ತು ಬಂಧ ಪತ್ರಗಳು, ಹೊಣೆಯ ಪರಿಕಲ್ಪನೆಗಳು ಮತ್ತು ಭದ್ರತೆಗಳ ವಿವರಪಟ್ಟಿಕೆಗಳು ಕಾರ್ಯದ ಹೊಣೆಯನ್ನು ನಿರ್ವಹಿಸುವಲ್ಲಿ ಸಂಭವನೀಯತೆಯ ಬಳಕೆ, ವಿಷಯದ ಸಂದರ್ಭಾನುಸಾರ ವಿವರಪಟ್ಟಿಕೆ, ಬಂಡವಾಳ ಆಸ್ತಿಗಳ ಬೆಲೆ ನಿರ್ಧರಿಸುವ ಮಾದರಿ (ಸಿ.ಎ.ಪಿ.ಎಂ) ಮತ್ತು ಸಟ್ಟಾ ವ್ಯಾಪಾರಕ್ಕೆ ಬೆಲೆ ನಿರ್ಧರಿಸುವ ಸಿದ್ಧಾಂತದ (ಎ.ಪಿ.ಟಿ) ಪರಿಚಯ.

ಬಿ. ಪ್ರಮುಖ ಆಯವ್ಯಯದ ಮೂಲಗಳು: ನಗದು ಹರಿವಿನ ಮೌಲ್ಯನಿರ್ಣಯ–ಮಾಧ್ಯಮಿಕ ಮತ್ತು ಅಂತಿಮ ಆಧಾರದ ಮೇಲೆ ಅಂತಿಮ ನಗದು ಹರಿವುಗಳು, ಬಂಡವಾಳ ಆಯವ್ಯಯ ನಿರ್ಧಾರ ನಿಯಮಗಳು, ಆರ್ಥಿಕ ಲಾಭ, ಎ.ಆರ್.ಆರ್, ಡಿ.ಪಿ.ಎಫ್ ತಂತ್ರಗಳು, ಎನ್.ವಿ.ಪಿ, ಐ.ಆರ್.ಆರ್ ಪಿ.ಐ

ಸಿ. ಬಂಡವಾಳದ ವೆಚ್ಚ: ಸಾಲದ ವೆಚ್ಚ, ಒಪ್ಪಿಸಿದ ಸ್ಟಾಕ್, ಈಕ್ವಿಟಿ ಗಣನೆ, ಡಬ್ಲ್ಯೂ.ಎ.ಸಿ.ಸಿ. ಸಿ.ಪಿ.ಎ.ಎಂ. ಪ್ರಸ್ತಾವನೆ, ಹೊಂದಾಣಿಕೆ ಹೊಣೆಯನ್ನು ನಿರ್ಣಯಿಸುವ ಡಬ್ಲ್ಯೂ.ಎ.ಸಿ.ಸಿ., ದೀರ್ಘಕಾಲದ ಹಣಕಾಸು, ಸಾಲದ ಸಾರ್ವಜನಿಕ ವಿಷಯ, ಒಪ್ಪಿಸಿದ ಸಂಚಿತ ನಿಧಿ ಮತ್ತು ಸಾಮಾನ್ಯ ಸಂಚಿತ ನಿಧಿ ಅವಧಿಯ ಸಾಲಗಳು.

ಡಿ. ಬಂಡವಾಳ ರಚನೆಯ ಸಿದ್ಧಾಂತಗಳು: ಸಾಂಪ್ರದಾಯಿಕ ದೃಷ್ಟಿಕೋನ ಮತ್ತು ಎಂ.ಎಂ. ಕಲ್ಪನೆ, ಎಂ.ಎಂ. ಸ್ಥಾನ. I ಮತ್ತು II ಮಿಲ್ಲರ್‌ನ ಸ್ಥಾನ. ಅಭ್ಯಾಸದಲ್ಲಿ ಬಂಡವಾಳ ರಚನೆಯನ್ನು

ವಿನ್ಯಾಸಗೊಳಿಸುವುದು – ಇ.ಬಿ.ಐ.ಟಿ. ಇ.ಪಿ.ಎಸ್. ವಿಶ್ಲೇಷಣೆಗಳು. ಲಾಭಾಂಶ ನಿರ್ಧಾರಣೆಯ ಸುಸಂಬದ್ಧತೆ ಮತ್ತು ಲಾಭಾಂಶಗಳ ಅಸಂಬದ್ಧತೆ.

ಇ. ಕಾರ್ಯನಿರ್ವಹಣೆಯ ಬಂಡವಾಳ ನಿರ್ವಹಣೆ ಮತ್ತು ಹಣಕಾಸು: ನಗದು ನಿರ್ವಹಣೆ, ಸ್ವೀಕರಿಸಬಹುದಾದ ನಿರ್ವಹಣೆ ಮತ್ತು ತಪಶೀಲು ಪಟ್ಟಿ ನಿರ್ವಹಣೆ, ಭಾರತದಲ್ಲಿ ಕಾರ್ಯನಿರ್ವಹಣಾ ಬಂಡವಾಳ ಹಣಕಾಸು.

**ಎನ್. ವ್ಯವಹಾರ ನಿರ್ವಹಣೆ**

ಎ. ಸಾಮಾಜಿಕ ವ್ಯವಸ್ಥೆಯಾಗಿ ವ್ಯವಹಾರ. ಭಾರದಲ್ಲಿ ವ್ಯವಹಾರದ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಪಾತ್ರ ಮತ್ತು ವ್ಯವಹಾರದ ಮೇಲೆ ಅದರ ಪ್ರಭಾವ. ವ್ಯವಹಾರದ ನೀತಿಗಳು ಮತ್ತು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ, ಕಾರ್ಪೋರೇಟ್ ಆಡಳಿತದಲ್ಲಿ ವಿಷಯಗಳು.

ಬಿ. ಭಾರತದ ಆರ್ಥಿಕ ರಚನೆ.- ಭಾರತದಲ್ಲಿ ಅರ್ಥವ್ಯವಸ್ಥೆಯನ್ನು ರೂಪಿಸುವುದು, ಮಾರುಕಟ್ಟೆ ಅರ್ಥವ್ಯವಸ್ಥೆಗೆ ಮಿಶ್ರ ಅರ್ಥ ವ್ಯವಸ್ಥೆಯಿಂದ ವ್ಯವಹಾರ, ಸರ್ಕಾರಿ ಮತ್ತು ಖಾಸಗಿ ವಲಯಗಳ ರೂಪುರೇಷೆ, ಕೈಗಾರಿಕೆಯ ಗುಣಲಕ್ಷಣಗಳು, ಸೇವಾ ಮತ್ತು ಕೃಷಿ ವಲಯಗಳು, ಪ್ರಾದೇಶಿಕ ಮತ್ತು ಕ್ಷೇತ್ರೀಯ ಅಸಮಾನತೆಗಳು, ಜಿ.ಡಿ.ಪಿ.ಯಲ್ಲಿ ದ್ವಂದ್ವ ಧೋರಣೆಗಳು.

ಸಿ. ಭಾರತ ವಿತ್ತೀಯ ಮತ್ತು ಹಣಕಾಸು ವ್ಯವಸ್ಥೆ.- ಬ್ಯಾಂಕಿಂಗ್ ವಲಯವನ್ನು ನಿಯಂತ್ರಿಸುವಲ್ಲಿ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಆರ್‌ಬಿಐ ಪಾತ್ರ, ಭಾರತದ ಹಣಕಾಸು ವ್ಯವಸ್ಥೆ.- ಹಣದ ಮಾರುಕಟ್ಟೆ ಮತ್ತು ಬಂಡವಾಳ ಮಾರುಕಟ್ಟೆಗಳು, ಭಾರತದಲ್ಲಿ ಸ್ಟಾಕು ವಿನಿಮಯಗಳು ಮತ್ತು ಭಾರತದಲ್ಲಿ ಸ್ಟಾಕ್ ಮಾರುಕಟ್ಟೆ ಸುಧಾರಣೆಗಳು, ಭಾರತದಲ್ಲಿ ಕೈಗಾರಿಕಾ ಹಣಕಾಸು – ಭಾರತದಲ್ಲಿ ಸ್ಟಾಕ್ ಮಾರುಕಟ್ಟೆ ಸುಧಾರಣೆಗಳು. ಹಣಕಾಸು ಸಂಸ್ಥೆಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಅಭಿವೃದ್ಧಿಯ ಪಾತ್ರ ಮತ್ತು ಸರ್ಕಾರದ ವೆಚ್ಚದ ತೆರಿಗೆ ನಿರ್ಧಾರಣೆಯಲ್ಲಿ ಹೊರಡಿಸಲಾದ ಇಎಕ್ಸ್‌ಐಎಂ ಮತ್ತು ಇಸಿಜಿಸಿಯ ರಫ್ತುಗಳ ಮತ್ತು ಆಮದುಗಳು ಎನ್‌ಬಿಎಫ್‌ಸಿಗಳ ಹಣಕಾಸು ನಿರ್ವಹಣೆ ಎಫ್.ಆರ್.ಬಿ.ಎಂ. ಕಾರ್ಯ ವಿತ್ತೀಯ ಕೊರತೆಯ ಸಮಸ್ಯೆಗಳು.

ಡಿ. ಭಾರತೀಯ ಸಮಾಜ, ಸಂಸ್ಕೃತಿ ಮತ್ತು ರಾಜಕೀಯ, ಭಾರತದ ಪ್ರಮುಖ ಸಾಮಾಜಿಕ ಸಮಸ್ಯೆಗಳು, ಭಾರತೀಯ ಸಮಾಜದ ಮೇಲೆ ಆಧುನಿಕತೆಯ ಪ್ರಭಾವ, ಪ್ರಜಾಪ್ರಭುತ್ವ, ಲಿಂಗ, ಪರಿಸರಾತ್ಮಕ ವಿಷಯಗಳು.

ಇ. ಅಂತರಾಷ್ಟ್ರೀಯ ವ್ಯವಹಾರ ಸನ್ನಿವೇಶ- ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತ ಅದರ ಸ್ಥಾನಮಾನ ಮತ್ತು ಸಂಭಾವ್ಯತೆ, ಭಾರತೀಯರ ವ್ಯಾಪಾರದಲ್ಲಿ ಪರಿಣಾಮ ಬೀರುವ ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿನ, ವಿಷಯಗಳು, (ಐ.ಪಿ.ಆರ್), ಭಾರತದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪಾತ್ರ ಮತ್ತು ಭಾರತದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮತ್ತು ವಿದೇಶಿ ರಾಷ್ಟ್ರಗಳಲ್ಲಿ ಭಾರತದ ಹೂಡಿಕೆ.

## ಬಿ. ವ್ಯವಹಾರ ಕಾನೂನು ಮತ್ತು ಪದ್ಧತಿ

ಎ. ಕಾನೂನುಗಳ ರೂಪುರೇಷೆ: ಕೈಗಾರಿಕೆಗಳ ನಿಯಂತ್ರಣಕ್ಕೆ ಸಂಬಂಧಿಸಿದವು, ಐ.ಡಿ.ಆರ್.ಎ ಅಧಿನಿಯಮ, ವ್ಯಾಪಾರ ಅಧಿನಿಯಮ, ಬೆಲೆ ಮತ್ತು ಹಂಚಿಕೆ ನಿಯಂತ್ರಣಗಳು, ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಐ.ಆರ್.ಡಿ.ಎ., ಭಾರತೀಯ ದೂರವಾಣಿ ನಿಯಂತ್ರಣ ಪ್ರಾಧಿಕಾರ (ಟಿ.ಆರ್.ಎ.ಐ)

ಬಿ. ಕಂಪನಿ ಕಾನೂನು: ಸಂಘಟನೆ, ನಿರ್ವಹಣೆ ಮತ್ತು ಆಡಳಿತ ಮತ್ತು ಸಮಾಪನಕ್ಕೆ ಸಂಬಂಧಪಟ್ಟಂತೆ 1956ರ ಭಾರತ ಕಂಪನಿ ಅಧಿನಿಯಮದ ರೂಪುರೇಷೆ ವಿವರ ಪಟ್ಟಿಕೆಗಳನ್ನು ಸಲ್ಲಿಸುವುದು, ದುರ್ವ್ಯವಸ್ಥಾಪನೆ ಮತ್ತು ದಬ್ಬಾಳಿಕೆಯ ವಿರುದ್ಧ ಪರಿಹಾರೋಪಾಯಗಳು, ಸರ್ಕಾರದ ಮೂಲಕ ತನಿಖಾಧಿಕಾರಗಳು, ಉತ್ತಮ ಕಾರ್ಪೋರೇಟ್ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು, ಕಾರ್ಪೋರೇಟ್ ಆಡಳಿತಕ್ಕೆ ಇತ್ತೀಚಿನ ತಿದ್ದುಪಡಿಗಳು.

ಸಿ. ಸ್ವಾಮ್ಯಗಳ ಮತ್ತು ವ್ಯಾಪಾರ ಚಿಹ್ನೆಯ ಅಧಿನಿಯಮ: ಬೌದ್ಧಿಕ ಸ್ವತ್ತು ಹಕ್ಕುಗಳ ವಿಷಯಗಳು: ಹಕ್ಕುಗಳು ಮತ್ತು ಸೈಬರ್ ಕಾನೂನುಗಳು, ವಿದೇಶಿ ವಿನಿಮಯ ವ್ಯವಸ್ಥಾಪನೆ (ಎಫ್.ಇ.ಎಂ.ಎ)

ಡಿ. ಭದ್ರತಾ ಮಾರುಕಟ್ಟೆ ಕಾನೂನುಗಳು: ಭಾರತದ ಭದ್ರತಾ ಮತ್ತು ವಿನಿಮಯ ಮಂಡಳಿಯ ರೂಪುರೇಷೆಗಳ ಅಧಿನಿಯಮ (ಎಸ್.ಇ.ಬಿ.ಐ), ಭದ್ರತೆಗಳ ಒಪ್ಪಂದ ಅಧಿನಿಯಮ, ದಾಸ್ತಾನು, ವಿನಿಮಯಗಳಿಗೆ ಸಂಬಂಧಪಟ್ಟ ಕಾನೂನುಗಳು, ಎಸ್.ಎ.ಆರ್. ಎಫ್.ಇ.ಎಸ್.ಐ ಅಧಿನಿಯಮ.

ಜಿ. ಪರಿಸರ ಸಂರಕ್ಷಣೆ ಅಧಿನಿಯಮ: ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟ ಕಾನೂನು. ಮಾಲಿನ್ಯ ನಿಯಂತ್ರಣ ಮಂಡಳಿಗಳ ಪಾತ್ರ. 1986ರ ಗ್ರಾಹಕ ಸಂರಕ್ಷಣಾ ಅಧಿನಿಯಮ. ಗ್ರಾಹಕ ನ್ಯಾಯಾಧೀಕರಣಗಳು, ಭಾರತದಲ್ಲಿ ಬಳಕೆದಾರರ ಹಿತರಕ್ಷಣೆ.

**ಸಿ. ವ್ಯವಹಾರ ಅರ್ಥಶಾಸ್ತ್ರ**

ಎ. ಸಮಗ್ರ ಅರ್ಥಶಾಸ್ತ್ರ: ಪೀಠಿಕೆ, ಸಮಗ್ರ ಅರ್ಥಶಾಸ್ತ್ರ ಮತ್ತು ವ್ಯವಹಾರ ಮತ್ತು ಕೈಗಾರಿಕೆಯೊಂದಿಗೆ ಪ್ರಕ್ರಿಯೆಗಳು. ಸಂಪನ್ಮೂಲಗಳು ಮತ್ತು ಆರ್ಥಿಕ ವ್ಯವಸ್ಥೆಗಳ ಗುಣಗಳು. ಮುಕ್ತ ಮಾರುಕಟ್ಟೆ ಮತ್ತು ಮಿಶ್ರ ಆರ್ಥಿಕತೆ, ರಾಷ್ಟ್ರೀಯ ಆದಾಯ ಪರಿಕಲ್ಪನೆ, ರಾಷ್ಟ್ರೀಯ ಆದಾಯದ ಗಣನೆ ಮತ್ತು ವೆಚ್ಚದ ವಿಧಾನಗಳು, ರಾಷ್ಟ್ರೀಯ ಆದಾಯ ಗಣನೆಯ ಸಮಸ್ಯೆಗಳು.

ಬಿ. ಬಳಕೆಯ ಪ್ರಕಾರ್ಯಗಳು: ಬಳಕೆ, ಉಳಿತಾಯಗಳು, ಹೂಡಿಕೆ, ಬಳಕೆಯ ಕನಿಷ್ಠ ಮಿತಿಯ ಪ್ರವೃತ್ತಿ, ಉಳಿತಾಯದ ಕನಿಷ್ಠ ಮಿತಿಯ ಪ್ರವೃತ್ತಿ, ಗುಣಕ, ಮಿತವ್ಯಯದ ವಿರೋಧಾಭಾಸ, ಆದಾಯ ಮತ್ತು ಉದ್ಯೋಗ ನಿರ್ಣಯ.

ಸಿ. ಹೂಡಿಕೆಯ ಪ್ರಕಾರ್ಯಗಳು: ಬಂಡವಾಳ ಕನಿಷ್ಠ ಕಾರ್ಯಕ್ಷಮತೆಯ ಪರಿಚಯ, ಬಂಡವಾಳದ ಕನಿಷ್ಠ ಮಿತಿ, ಕಾರ್ಯಕ್ಷಮತೆ ಮತ್ತು ಬಡ್ಡಿಯದರ, ಬಂಡವಾಳದ ಕನಿಷ್ಠ ಮಿತಿ ಕಾರ್ಯಕ್ಷಮತೆಗೆ ಪ್ರಭಾವಬೀರುವ ಅಂಶಗಳು, ಪತ್ತಿನ ಹೂಡಿಕೆ, ಬಡ್ಡಿಯ ಸಿದ್ಧಾಂತಗಳು – ಖಾಸಗಿ ಹೂಡಿಕೆಗೆ ಉತ್ತೇಜನ, ಪತ್ತಿನ ಹೂಡಿಕೆ, ಬಡ್ಡಿಯ ಸಿದ್ಧಾಂತಗಳು.

ಡಿ. ಗುಣಕದ ಪರಿಕಲ್ಪನೆಗಳು: ಹೂಡಿಕೆಯ ಮೇಲಿನ ಆದಾಯ ಗುಣಕ, ಗುಣಕದ ಉಪಯೋಗಗಳು. ಆದಾಯ ಹರಿವಿನ ಸೋರಿಕೆಗಳು ಮತ್ತು ಗುಣಕದ ಮೇಲೆ ಅದರ ಪರಿಣಾಮ, ತ್ವರಿತ ಸ್ಥಿತಿಕಾರ್ಯ, ತ್ವರಿತ ಸ್ಥಿತಿ ಪರಿಕಲ್ಪನೆ, ತ್ವರಿತ ಸ್ಥಿತಿಯ ಮಿತಿಗಳು.

ಇ. ಹಣ. ಹಣಕಾಸಿನ ಪದ್ಧತಿ. ಸಾಲದ ಪಾತ್ರ, ಹಣಕಾಸಿನ ಮಧ್ಯವರ್ತಿಗಳು. ಬಡ್ಡಿ ಮತ್ತು ಸಮಗ್ರ ಆರ್ಥಿಕ ಸಮತೋಲನ. ಸೆಂಟ್ರಲ್ ಬ್ಯಾಂಕ್. ಹಣಕಾಸಿನ ನಿರ್ವಹಣೆ ಮತ್ತು ಕಾರ್ಯ ನೀತಿ. ವಿತ್ತೀಯ ನೀತಿ ಮತ್ತು ಸಾರ್ವಜನಿಕ ಋಣ. ಹಣಕಾಸಿನ ಸಹಕಾರ ಮತ್ತು ವಿತ್ತೀಯ ನೀತಿಗಳ ಸಮನ್ವಯ.

ಎಫ್. ಆರ್ಥಿಕ ಬೆಳವಣಿಗೆ. ವಾಸ್ತವಾಂಶಗಳನ್ನು ನಿರ್ಧರಿಸುವ ಆರ್ಥಿಕ ಬೆಳವಣಿಗೆ, ಬೆಳವಣಿಗೆಯ ಮಾದರಿಗಳು, ಬಂಡವಾಳ ಹುಟ್ಟುವಳಿ ಅನುಪಾತ, ಬೆಳವಣಿಗೆಯ ಸಮಸ್ಯೆಗಳು, ಆರ್ಥಿಕ

ಸ್ಥಿರತೆಯ ಜೊತೆಗೆ ಕಾರ್ಯನೀತಿಗಳು, ವ್ಯವಹಾರ ಆವರ್ತ, ಹಣದುಬ್ಬರ ಮತ್ತು ಹಣದುಬ್ಬರದ ಇಳಿತ, ನಿಯಂತ್ರಣ ಕ್ರಮಗಳು, ಬೆಳವಣಿಗೆಯು ಮತ್ತು ಸ್ಥಿರತೆ ನಡುವಿನ ವಿರೋಧಗಳು.

ಜಿ. ಸಾರ್ವಜನಿಕ ಹಣಕಾಸು: ಸಾರ್ವಜನಿಕ ಹಣಕಾಸು ಮತ್ತು ಖಾಸಗಿ ಹಣಕಾಸಿನ ನಡುವಿನ ವಿಭಿನ್ನತೆ. ಸಾರ್ವಜನಿಕ ಹಣಕಾಸಿನ ಪ್ರಾಮುಖ್ಯತೆ. ಮುಂದುವರಿದ ರಾಷ್ಟ್ರಗಳಲ್ಲಿ ಸಾರ್ವಜನಿಕ ಹಣಕಾಸಿನ ಪಾತ್ರ. – ಭಾರತೀಯ ಸಾರ್ವಜನಿಕ ಹಣಕಾಸು. – ಕೇಂದ್ರ ಸರ್ಕಾರದ ರಾಜಸ್ವಗಳು ಮತ್ತು ಆದಾಯ – ಕೇಂದ್ರ ಸರ್ಕಾರದ ಆಯವ್ಯಯ.

ಹೆಚ್. ಸಂದಾಯಗಳ ಬಾಕಿ: ಅರ್ಥ– ವ್ಯಾಪಾರದ ಬಾಕಿ ಮತ್ತು ಸಂದಾಯಗಳ ಬಾಕಿ, ಬಿ.ಓ.ಪಿ.ಗಳ ರಚನೆ, ಬಿ.ಓ.ಪಿಗಳ ಅಸಮತೋಲನದ ಅರ್ಥ.

ಐ. ವಿದೇಶಿ ವಿನಿಮಯ: ವಿನಿಮಯ ದರ ನಿಗದಿಯ ನಿರ್ಧಾರಣೆ ಮತ್ತು ಬೆಲೆ ಅಸ್ಥಿರತೆ, ಫೋರೇಕ್ಸ್ ರಿಸರ್ವ್‌ಗಳ ಮರುಮೌಲ್ಯೀಕರಣ ಮತ್ತು ಅಪಮೌಲ್ಯೀಕರಣ, ಫೋರೇಕ್ಸ್ ರೀಸರ್ವ್‌ಗಳ ಘಟಕಗಳು.

ಕ್ಯೂ. ಮುಂದುವರಿದ ವ್ಯವಹಾರ ತೆರಿಗೆ ನಿರ್ಧಾರಣೆ

ಎ. ಭಾರತೀಯ ತೆರಿಗೆ ವ್ಯವಸ್ಥೆ: ಸರ್ಕಾರದ ಪ್ರಕಾರ್ಯಗಳು – ಸಾರ್ವಜನಿಕ ವೆಚ್ಚ – ತೆರಿಗೆ ನಿರ್ಧಾರಣೆ, ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಗಳ ಪಲ್ಲಟ ಮತ್ತು ಹೊರೆ, ಪ್ರಗತಿಪರ ತೆರಿಗೆ ನಿರ್ಧಾರಣೆ.

ಬಿ. ಭಾರತದಲ್ಲಿ ತೆರಿಗೆ ನಿರ್ಧಾರಣೆ: ಕೇಂದ್ರ ರಾಜ್ಯ ಮತ್ತು ಸ್ಥಳೀಯ ಸರ್ಕಾರದ ತೆರಿಗೆ ನಿರ್ಧಾರಣೆ ಅಧಿಕಾರಗಳಿಗೆ ಸಂಬಂಧಪಟ್ಟ ಸಂವಿಧಾನಾತ್ಮಕ ಉಪಬಂಧಗಳು, ಕೇಂದ್ರ ಮತ್ತು ರಾಜ್ಯಸರ್ಕಾರಗಳ ತೆರಿಗೆ ಸುಧಾರಣೆಗಳ ಸಮಿತಿಗಳು – ಹಣಕಾಸು ಆಯೋಗಗಳು.

ಸಿ. ಪ್ರತ್ಯಕ್ಷ ತೆರಿಗೆ: ಆದಾಯ ತೆರಿಗೆ – ಸಂಪತ್ತಿನ ತೆರಿಗೆ – ಕೊಡುಗೆ ತೆರಿಗೆ – ವೆಚ್ಚದ ತೆರಿಗೆ – ಜೀವ ವಿಮಾ ತೆರಿಗೆ

ಡಿ. ಪರೋಕ್ಷ ತೆರಿಗೆ: ಕೇಂದ್ರ ಅಬಕಾರಿ ಸುಂಕ – ಸೀಮಾ ಸುಂಕ, ಕೇಂದ್ರ ಮಾರಾಟ ತೆರಿಗೆ ಮತ್ತು ಸೇವಾ ತೆರಿಗೆ.

ಇ. ರಾಜ್ಯ ಸರ್ಕಾರ ತೆರಿಗೆ: ಮೌಲ್ಯವರ್ಧಿತ ತೆರಿಗೆ – ವೃತ್ತಿ ತೆರಿಗೆ, ಮೋಟಾರು ವಾಹನಗಳು ಮತ್ತು ಸಾರಿಗೆ ತೆರಿಗೆ, ಜಾಹಿರಾತು – ಮನರಂಜನಾ ತೆರಿಗೆ ಮತ್ತು ಕ್ರೀಡಾ ತೆರಿಗೆ, ಪಣ ಮತ್ತು ಜೂಜಿನ ತೆರಿಗೆ, ವಿದ್ಯುತ್‌ಚ್ಛಕ್ತಿ ತೆರಿಗೆ – ಕೃಷಿ ಆದಾಯ ಮತ್ತು ಭೂ ಕಂದಾಯದ ತೆರಿಗೆ.

ಎಫ್. ಕಾರ್ಪೋರೇಟ್ ತೆರಿಗೆ ಕಾನೂನು ಮತ್ತು ಯೋಜನೆ: ಪೀಠಿಕೆ – ಕಂಪನಿಗಳ ತೆರಿಗೆ ನಿರ್ಧಾರಣೆ, ಕಂಪನಿಗಳ ಪರಿಭಾಷೆ, ಕಂಪನಿಯ ವಾಸದ ಹಕ್ಕಿನ ಸ್ಥಾನಮಾನ, ವಾಸದ ಹಕ್ಕಿನ ಸ್ಥಾನಮಾನದ ನಡುವಿನ ಸಂಬಂಧ ಮತ್ತು ತೆರಿಗೆ ಹೊರೆ.

ಜಿ. ಆದಾಯದ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಕಂಪನಿಗಳ ತೆರಿಗೆ ವಿಧಿಸಬಹುದಾದ ಆದಾಯದ ಗಣನೆ: ಮನೆ ಸ್ವತ್ತು – ಲಾಭ ಮತ್ತು ವ್ಯವಹಾರ ಅಥವಾ ವೃತ್ತಿಯಿಂದ ಲಾಭಗಳು, ಬಂಡವಾಳ–ಲಾಭಗಳು, ಇತರೆ ಮೂಲಗಳಿಂದ ಆದಾಯ.

ಎಚ್. ಕಂಪನಿಗಳ ತೆರಿಗೆ ಹೊಣೆಗಾರಿಕೆ ಗಣನೆ: ನಿವ್ವಳ ಒಟ್ಟು ಆದಾಯದಿಂದ ಕಡಿತಗಳು, ನಷ್ಟಗಳ ವಜಾವಟ್ಟು ಮತ್ತು ಮುಂದುವರಿಕೆ, ಕನಿಷ್ಠ ಬದಲಿ ತೆರಿಗೆ.

ಐ. ತೆರಿಗೆ ಯೋಜನೆ: ತೆರಿಗೆ ತಪ್ಪಿಸುವುದು, ತೆರಿಗೆ ತಪ್ಪಿಸುವುದು, ಹೊಸ ವ್ಯವಹಾರದ ವಜಾವಟ್ಟಿಗೆ ಉಲ್ಲೇಖದೊಂದಿಗೆ ತೆರಿಗೆ ಯೋಜನೆ, ವ್ಯವಹಾರದ ಸ್ಥಳ, ವ್ಯವಹಾರದ ಸ್ವರೂಪ, ಸಂಘಟನೆಗಳ ಸ್ವರೂಪ, ವ್ಯವಸ್ಥಾಪನಾ ನಿರ್ಧಾರಗಳು + ಲೀನಗೊಳಿಸುವಿಕೆ ಅಥವಾ ಲೀನಗೊಳಿಸದಿರುವಿಕೆ

ಜೆ. ತೆರಿಗೆ ನಿರ್ಧಾರಣೆಯ ಪ್ರಕ್ರಿಯೆ: ತೆರಿಗೆ ಹಿಂತಿರುಗಿಸುವಿಕೆ, ಸಂಪನ್ಮೂಲಗಳಲ್ಲಿ ತೆರಿಗೆ ಕಡಿತ,– ತೆರಿಗೆಯ ಮುಂಗಡ ಸಂದಾಯ, ಬಡ್ಡಿ ಹಣದ ಮರುಪಾವತಿ, ಅಪೀಲುಗಳು ಮತ್ತು ಪುನರೀಕ್ಷಣೆ ದಂಡನೆಗಳು ಮತ್ತು ಪ್ರಾಸಿಕ್ಯೂಷನ್‌ಗಳು, ಕಂಪನಿಗಳ ಮೇಲೆ ಸಂಪತ್ತಿನ ತೆರಿಗೆ.

(VIII) ಪತ್ರಿಕೆ– VIII

ಲೆಕ್ಕಪರಿಶೋಧನೆಯ ತತ್ವಗಳು ಮತ್ತು ಅಭ್ಯಾಸ ಮತ್ತು ಗಣಕ ಯಂತ್ರ ಪರಿಕಲ್ಪನೆಗಳ

ಅ – ವಾಣಿಜ್ಯ ಮತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ

**ಆರ್. ಲೆಕ್ಕ ಪರಿಶೋಧನೆಯ ತತ್ವಗಳು ಮತ್ತು ಅಭ್ಯಾಸ**

ಎ. ಪೀಠಿಕೆ–ಲೆಕ್ಕಪರಿಶೋಧನೆಯ ಅರ್ಥ ಮತ್ತು ಪರಿಭಾಷೆ – ಲೆಕ್ಕಪರಿಶೋಧನೆಯ ಶಾಖೆಗಳು – ಲೆಕ್ಕಪರಿಶೋಧಕನ ಅರ್ಹತೆಗಳು, ಲೆಕ್ಕಪರಿಶೋಧನೆಯ ಉದ್ದೇಶಗಳು – ಲೆಕ್ಕಪರಿಶೋಧನೆಯ ಅನುಕೂಲತೆಗಳು – ಲೆಕ್ಕಪರಿಶೋಧನೆ ಕಾರ್ಯಕ್ರಮದ ವಿಧಗಳು – ಲೆಕ್ಕ ಪರಿಶೋಧನಾ ವರದಿ – ನೇಮಕಾತಿ – ಅರ್ಹತೆಗಳು – ಅನರ್ಹತೆಗಳು – ಕಂಪನಿ ಲೆಕ್ಕಪರಿಶೋಧಕನ ಹಕ್ಕುಗಳು ಮತ್ತು ಕರ್ತವ್ಯಗಳು.

ಬಿ. ಆಂತರೀಕ ಪರಿಶೀಲನೆ: ಅರ್ಥ ಮತ್ತು ಉದ್ದೇಶಗಳು – ಖಾತರಿ – ಅರ್ಥ ಮತ್ತು ಪ್ರಾಮುಖ್ಯತೆ, ನಗದು ವ್ಯವಹಾರಗಳ ಖಾತರಿ.

ಸಿ. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪರಿಶೀಲನೆ ಮತ್ತು ಮೌಲ್ಯನಿರ್ಣಯ

ಡಿ. ವಿವಿಧ ಸಂಸ್ಥೆಗಳ ಉಪಯೋಗ, ಏಕ ಪಕ್ಷೀಯ ವ್ಯಾಪಾರಿ, ಪಾಲುದಾರಿಕೆ, ಫರ್ಮ್ – ಸಹಕಾರ ಸಂಘಗಳು – ಶೈಕ್ಷಣಿಕ ಸಂಸ್ಥೆಗಳು.

ಇ. ಗಣಕೀಕೃತ ಸಂದರ್ಭದಲ್ಲಿ ಲೆಕ್ಕಪರಿಶೋಧನೆ. (ಗಣೀಕೃತ ಲೆಕ್ಕಪರಿಶೋದನೆಯ ಉಪಯೋಗಗಳು ಮತ್ತು ಅನಿವಾರ್ಯತೆಗಳು)

**ಎಸ್. ಕಂಪ್ಯೂಟರ್‌ನ ಮೂಲಭೂತ ಪರಿಕಲ್ಪನೆಗಳು**

ಎ. ಪೀಠಿಕೆ.– ಸ್ಪ್ರೆಡ್‌ಶೀಟ್‌ನ ಹಣಕಾಸಿನ ಪ್ರಕಾರ್ಯಗಳು ಮತ್ತು ಅಂಕಿಅಂಶಗಳ ಪ್ರಕಾರ್ಯಗಳು, ಸವಕಳಿ – ಗುತ್ತಿಗೆ ನೀಡುವುದು – ಕಂಪನಿಯ ಮೌಲ್ಯನಿರ್ಣಯ, ನಗದು ಹರಿವಿನ ಅಂದಾಜು ಮಾದರಿಗಳು.

ಬಿ. ಸಂಶೋಧನಾ ಸಮಸ್ಯೆಗಳ ಕಾರ್ಯಚರಣೆಗಳು: ರೇಖೀಯ – ರೇಖಾತ್ಮಕವಲ್ಲದ ಸಮಗ್ರ ಪ್ರೋಗ್ರಾಮಿಂಗ್, ರವಾನೆ, ಸರದಿ ಮತ್ತು ತಪಶೀಲು ಪಟ್ಟಿಯ ಮಾದರಿಗಳು.

ಸಿ. ವ್ಯವಸ್ಥಾಪನಾ ಲೆಕ್ಕಪತ್ರ: ಬ್ರೇಕ್ ಇವೆನ್ ವಿಶ್ಲೇಷಣೆ – ಬಂಡವಾಳ ಪಟ್ಟಿಗಳ ವಿಶ್ಲೇಷಣೆ, ಗುಣಮಟ್ಟದ ಮೌಲ್ಯನಿರ್ಧಾರಣೆ ವ್ಯತ್ಯಾಸದ ವಿಶ್ಲೇಷಣೆ. ಬಂಡವಾಳ ಕರಾರು ಪತ್ರಗಳ ವೆಚ್ಚ, ಹೊಣೆ ನಿರ್ವಹಣೆ.

ಡಿ. ಯೋಜನಾ ವ್ಯವಸ್ಥಾಪನಾ ಸಾಧನಗಳು

ಎಸ್. ಸ್ವಾಟ್ ವಿಶ್ಲೇಷಣೆ.

ಟಿ. ಇ–ವಾಣಿಜ್ಯ

ಎ. ಇ–ವಾಣಿಜ್ಯ ಮತ್ತು ಇ–ವ್ಯವಹಾರದ ಪೀಠಿಕೆ. ಸಾಂಪ್ರದಾಯಿಕ ವ್ಯವಹಾರ ಮತ್ತು ಇ–ವ್ಯವಹಾರ, ಇ–ವಾಣಿಜ್ಯದ ಮಾದರಿಗಳು, ವೆಬ್ ಹರಾಜುಗಳು, ವಾಸ್ತವ ಸಹಭಾಗಿತ್ವ, ಪೋರ್ಟಲ್‌ಗಳು ಪ್ರವೇಶ ಮಾರ್ಗಗಳು, ಇ–ವ್ಯವಹಾರದ ರಾಜಸ್ವ ಮಾದರಿಗಳು.

ಬಿ. ವೆಬ್‌ಸರ್ವರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ – ವೆಬ್ ಸರ್ವರ್‌ಗಳಿಗಾಗಿ ಸಾಫ್ಟ್‌ವೇರ್ ವೆಬ್‌ಸೈಟ್ ಮತ್ತು ಅಂತರಜಾಲ ಉಪಯುಕ್ತತೆಯ ಪ್ರೋಗ್ರಾಂಗಳು. ವೆಬ್ ಸರ್ವರ್ ಹಾರ್ಡ್‌ವೇರ್. ವೆಬ್ ಹೋಸ್ಟಿಂಗ್ ಆಯ್ಕೆಗಳು – ವಿದ್ಯುನ್ಮಾನ ವಾಣಿಜ್ಯ ತಂತ್ರಾಂಶ.

ಸಿ. ಗ್ರಾಹಕ ಪರಿಣಾಮಕಾರಿ ವೆಬ್ ವಿನ್ಯಾಸ.– ಇ–ವ್ಯಾಪಾರ, ಇ–ಜಾಹೀರಾತು, ಇ–ಸಿ.ಆರ್.ಎಂ. ಇ–ಸಿ.ಆರ್.ಎಂ. ತಂತ್ರಜ್ಞಾನ, ಇಡಿಐ – ಪಿ.ಡಿ.ಐ – ಕಂಪ್ಯೂಟರ್ ಅಪರಾಧಗಳು ವ್ಯವಹಾರ ಅನ್ವಯತೆಗಳು, ಕಾನೂನು ವಿಷಯಗಳು, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2006

ಡಿ. ಭದ್ರತಾ ಅಪಾಯ – ಕ್ಷೇತ್ರ ವೀಕ್ಷಣೆ, ಕಾರ್ಯಗತಗೊಳಿಸುವುದು – ಇ–ವಾಣಿಜ್ಯ – ಭದ್ರತೆ ಅವಲಂಬಿತ ಕಂಪ್ಯೂಟರ್‌ನ ಸಂರಕ್ಷಣೆ – ಇ – ವಾಣಿಜ್ಯ ಸಂಪರ್ಕ ಚಾನಲ್‌ಗಳು ಮತ್ತು ವೆಬ್ ಸರ್ವರ್‌ಗಳ ಇನ್‌ಸ್ಕ್ರಿಪ್ಷನ್, ಎಸ್.ಎಸ್.ಎಲ್. ನಮೂದನೆ, ಬೆಂಕಿ ನಿರೋಧಕ ತಡೆಗೋಡೆ, ವಿದ್ಯುನ್ಮಾನ ಸಂದಾಯ ವ್ಯವಸ್ಥೆ.

ಯು. ನಿರ್ವಹಣಾ ಮಾಹಿತಿ ಸಿಸ್ಟಂಗಳು

ಎ. ಮೂಲ ಪರಿಕಲ್ಪನೆಗಳು: ಡಾಟಾ ಮತ್ತು ಮಾಹಿತಿ, ನಿರ್ವಹಣೆಯಲ್ಲಿ ಮಾಹಿತಿಯ ಅವಶ್ಯಕ ಪಾತ್ರ, ಮಾಹಿತಿ ವ್ಯವಸ್ಥೆಯ ಸಂಘಟನೆ, ಗೋರಿಸ್ಕಾಟ್, ಮಾರ್ಟಿನ್‌ಗ್ರೀಡ್, ಮಾಹಿತಿ ವ್ಯವಸ್ಥೆಗಳ ವಿಧಗಳು, ಟಿ.ಪಿ.ಎಸ್. ಎಂ.ಐ.ಎಸ್. ಡಿ.ಎಸ್.ಎಸ್. ಇ.ಎಸ್.ಎಸ್. ಓ.ಎ

ಬಿ. ಮುಂದುವರೆಯುತ್ತಿರುವ ತಂತ್ರಜ್ಞಾನ.– ಮುಂದುವರೆಯುತ್ತಿರುವ ತಂತ್ರಜ್ಞಾನದ ಬೆಳವಣಿಗೆ, ಸಾಮಾಜಿಕವಾಗಿ ಮುಂದುವರಿಯುತ್ತಿರುವ ಜಾಲತಾಣ, ವಿವಿಧ ರೀತಿಯಲ್ಲಿ ಮುಂದುವರೆಯುತ್ತಿರುವ ಪರಿಕಲ್ಪನೆಗಳು, ದೂರಸಂಪರ್ಕ ಜಾಲತಾಣಗಳು.

ಸಿ. ವ್ಯವಸ್ಥೆಯ ಅಭಿವೃದ್ಧಿ: ಅಭಿವೃದ್ಧಿ ಜೀವನಚಕ್ರದ ವ್ಯವಸ್ಥೆ ಪರಿಕಲ್ಪನೆ. (ಎಸ್.ಡಿ.ಎಸ್.ಸಿ) ನಕ್ಷೆಯ ಉಪಯೋಗಗಳು ಮತ್ತು ವಾಸ್ತುವಿನ ಸಂಬಂಧದ ಚಿತ್ರಗಳು. ಎಸ್.ಡಿ.ಎಲ್.ಸಿ.ಗಳಲ್ಲಿ ಪ್ರಯೋಗ.

ಡಿ. ತಂತ್ರಜ್ಞಾನಗಳ ಅನ್ವಯ: ಇ.ಆರ್.ಪಿ ಪರಿಕಲ್ಪನೆಗಳು, ಇ.ಆರ್.ಪಿ.ಯ ಬೆಳವಣಿಗೆ, ಪ್ರಸ್ತುತ ಇ.ಆರ್.ಪಿ ಪ್ಯಾಕೇಜ್‌ಗಳು, ಎಸ್.ಎ.ಪಿ. ಬಾನ್, ಎಂ.ಎಫ್‌ಜಿ – ಪಿ.ಆರ್.ಓ., ಮಾರ್ಗದರ್ಶಕ, ಇ.ಆರ್.ಪಿ ಬೆಳವಣಿಗೆ, ಇ.ಆರ್.ಪಿ ಮತ್ತು ಬಿ.ಪಿ.ಆರ್, ಇ.ಆರ್.ಪಿ. ಕಾರ್ಯಗತಗೊಳಿಸುವಿಕೆ ವಿಷಯ ಅಧ್ಯಯನಗಳು. (ಇ.ಆರ್.ಪಿ)

ಇ. ವೆಬ್ ಪ್ರಕಟಣೆ: ವೆಬ್ ಪ್ರಕಟಣೆ, ವೆಬ್‌ಸೈಟ್‌ಗಳ ವಿಧಗಳು, ವೆಬ್ ಸರ್ಫಿಂಗ್, ಟೂಲ್ಸ್, ಎಂ.ಎಸ್ ಮುಖಪುಟ, ವೆಬ್‌ಸೈಟ್ ವಿನ್ಯಾಸ, ಇ–ವಾಣಿಜ್ಯ, ಬಿ2ಬಿ, ಬಿ2ಸಿ, ಇ–ವಾಣಿಜ್ಯದ ಭದ್ರತಾ ವಿಷಯಗಳು, ನೈತಿಕ ವಿಷಯಗಳು, ಸೈಬರ್ ಕಾನೂನುಗಳು.

---

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಸ್. ಶಿವರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಹಣಕಾಸು ಇಲಾಖೆ (ಆಡಳಿತ ಮತ್ತು ಮುಂಗಡಗಳು).